# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶೈಕ್ಷಣಿಕ ಸಭಾಂಗಣದಲ್ಲಿ ದಿನಾಂಕ 30-12-2020ರ ಬುಧವಾರ ದಂದು ಪೂರ್ವಾಹ್ನ 11-30 ಗಂಟೆಗೆ ನಡೆದ ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆಯ ನಡಾವಳ.**

<u>ಹಾಜರಿದ್ದ ಸದಸ್ಯರುಗಳು:</u>

| | | |
|---|---|---|
| 1 | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರಇವರ ಪರವಾಗಿಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3 | ಪ್ರೊ. ಡಿ. ಆನಂದ್ | ಸದಸ್ಯರು |
| 4 | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 4 | ಡಾ. ಚೈತ್ರ ನಾರಾಯಣ | ಸದಸ್ಯರು |
| 5 | ಶ್ರೀ ಕುಮಾರ | ಸದಸ್ಯರು |
| 6 | ಶ್ರೀಮತಿ ಕೆ.ನಾಗರತ್ನಮ್ಮ | ಸದಸ್ಯರು |
| 7 | ಶ್ರೀ ದಿನೇಶ್ ಎಂ. ಗಾವಂಕರ್ | ಸದಸ್ಯರು |
| 8 | ಶ್ರೀ ಆರ್. ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 9 | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 10 | ಶ್ರೀಮತಿ ಪವಿತ್ರ ವೈ.ಕೆ. | ಸದಸ್ಯರು |
| 11 | ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 12 | ಡಾ. ಎಂ.ಎಸ್.ದಾಮೋದರ | ಸದಸ್ಯರು |
| 13 | ಡಾ. ಸೈಯದ್ ಕಾರುಝ ಮೊಹಿದ್ದೀನ್, | ಸದಸ್ಯರು |
| 14 | ಪ್ರೊ. ಎ.ಪಿ. ಜ್ಞಾನಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 15 | ಪ್ರೊ. ಟಿ.ಎಸ್.ದೇವರಾಜ, ಹಣಕಾಸು ಅಧಿಕಾರಿಗಳು | ಸದಸ್ಯರು |
| 17 | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

<u>ಹಾಜರಾಗದ ಸದಸ್ಯರು:</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಶ್ರೀ ಟಿ.ರಾಮಕೃಷ್ಣ, ಸಿಂಡಿಕೇಟ್ ಸದಸ್ಯರು

ಮೊದಲಿಗೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಇತ್ತೀಚೆಗೆ ನಿಧನರಾದ ಶ್ರೀ ಧರ್ಮೇಗೌಡ, ಉಪಸಭಾಪತಿ, ವಿಧಾನ ಪರಿಷತ್, ಇವರು ನಿಧನರಾದ ಪ್ರಯುಕ್ತ ಮೃತರ ಗೌರವಾರ್ಥ ಸಭೆಯಲ್ಲಿ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸುವುದರೊಂದಿಗೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು.

ಇದುವರೆಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ. ಕೆ.ಎಂ.ಮಹದೇವನ್, ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ಹಾಗೂ

ಹೊಸದಾಗಿ ಕುಲಸಚಿವ (ಪರೀಕ್ಷಾಂಗ)ರಾಗಿ ನೇಮಕವಾಗಿರುವ ಪ್ರೊ. ಎ.ಪಿ. ಜ್ಞಾನ ಪ್ರಕಾಶ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ಸಭೆಗೆ ಸ್ವಾಗತಿಸಿ, ಪರಿಚಯಿಸಲಾಯಿತು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| | ದಿನಾಂಕ 25-11-2020 ರಂದು ಜರುಗಿದ ಸಿಂಡಿಕೇಟಿನ 8ನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದೃಢೀಕರಿಸಲಾಯಿತು. |
| ಸಾಮಾನ್ಯ ಸಭೆ 2020/12.1 | ದಿನಾಂಕ: 09-09-2021ರ "ಸ್ವರ್ಣಗೌರಿ" ಹಬ್ಬದ ದಿನವನ್ನು ಮೈಸೂರು ವಿಶ್ವವಿದ್ಯಾನಿಲಯವು ಸ್ಥಳೀಯ ರಜೆ ಎಂದು ಘೋಷಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿನಿಂದಲೂ "ಸ್ವರ್ಣಗೌರಿ ವ್ರತ" ಹಬ್ಬದ ದಿನವನ್ನು ಸ್ಥಳೀಯ ಸಾರ್ವತ್ರಿಕ ರಜೆ ದಿನವೆಂದು ವಿಶ್ವವಿದ್ಯಾನಿಲಯವು ಘೋಷಿಸಿಕೊಂಡು ಬರಲಾಗುತ್ತಿರುವುದರಿಂದ, ಪ್ರಸಕ್ತ ಸಾಲಿನಲ್ಲಿ ದಿನಾಂಕ 09-09-2021ರ ಗುರುವಾರದಂದು ಬರುವ **"ಸ್ವರ್ಣಗೌರಿ ವ್ರತದ"** ದಿನವನ್ನು ವಿಶ್ವವಿದ್ಯಾನಿಲಯದಲ್ಲಿ "ಸ್ಥಳೀಯ ರಜೆ" ಎಂದು ಘೋಷಿಸಲು ಸಿಂಡಿಕೇಟ್ ಅನುಮೋದಿಸಿತು. |
| ಸಾಮಾನ್ಯ ಸಭೆ 2020/12.2 | ದಿವಂಗತ ಶ್ರೀ ಬೀರ, ಸೇವಕ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಪತ್ನಿಯಾದ ಶ್ರೀಮತಿ ನೇತ್ರಾವತಿ.ಕೆ ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ, ದಿವಂಗತ ಶ್ರೀ ಬೀರ, ಸೇವಕ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಪತ್ನಿಯಾದ ಶ್ರೀಮತಿ ನೇತ್ರಾವತಿ.ಕೆ ಇವರು ಉದ್ಯೋಗ ಕೋರಿ ನಿಗದಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಶ್ರೀಮತಿ ನೇತ್ರಾವತಿ.ಕೆ ಇವರನ್ನು ಅನುಕಂಪದ ಆಧಾರದ ಮೇಲೆ ಪರಿಚಾರಕರ ಹುದ್ದೆಯಲ್ಲಿ ನೇಮಕಾತಿ ಮಾಡಲು ಅನುಮೋದಿಸಿತು. |
| ಸಾಮಾನ್ಯ ಸಭೆ 2020/12.3 | ಸ್ವಾಮಿ ವಿವೇಕಾನಂದ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ವಾಮಿ ವಿವೇಕಾನಂದ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ವಿ.ಎನ್.ಶೇಷಗಿರಿರಾವ್ ಇವರ ನೇಮಕಾತಿ ಅವಧಿಯು ದಿನಾಂಕ 21-11-2020ರಂದು ಪೂರ್ಣಗೊಂಡಿರುವುದರಿಂದ, ಸದರಿ ವಿಭಾಗಕ್ಕೆ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.8,000/-ಗಳ ಗೌರವ ಸಂಭಾವನೆಯೊಂದಿಗೆ ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2020/12.4 | 2021-22ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣ, ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ಸಂಯೋಜನೆ ನವೀಕರಣ, ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, |

| | |
|---|---|
| | ಪ್ರಥಮ ದರ್ಜೆ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ, ಶಿಕ್ಷಣ ಕಾಲೇಜುಗಳ ಸಂಯೋಜನೆ ನವೀಕರಿಸಲು ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಕುರಿತು. |
| | ಶ್ರೀ ಎಸ್.ಡಿ.ದೊಡ್ಡಚಾರಿರವರು ಮಾತನಾಡುತ್ತಾ, ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಸ್ಥಳೀಯ ವಿಚಾರಣಾ ಸಮಿತಿಗೆ ಸಿಂಡಿಕೇಟ್ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಭೆಯ ಗಮನಕ್ಕೆ ತಂದು, ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಸಹ ಸಿಂಡಿಕೇಟ್ ಸದಸ್ಯರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡುವ ಬಗ್ಗೆ ಸಲಹೆಯನ್ನಿತ್ತರು.<br><br>ಮಾನ್ಯ ಸದಸ್ಯರ ಸಲಹೆಯನ್ನು ಡಾ. ಈ.ಸಿ.ನಿಂಗರಾಜ್ ಗೌಡರವರು ಅನುಮೋದಿಸಿದರು.<br><br>ನಂತರ ಮಾನ್ಯ ಕುಲಪತಿಯವರು ಮಾತನಾಡಿ, ಸರ್ಕಾರದಿಂದ ಮಾನ್ಯ ಸಿಂಡಿಕೇಟ್ ಸದಸ್ಯರನ್ನು ವಿಶ್ವವಿದ್ಯಾನಿಲಯದ ಕೆಲವೊಂದು ಸಮಿತಿಗಳಿಗೆ ಮಾತ್ರ ಸದಸ್ಯರನ್ನಾಗಿ ನೇಮಕ ಮಾಡಬಹುದೆಂದು ನೋಟ್ ಬಂದಿರುವುದರಿಂದ, ಕೆಲವೊಂದು ಸಮಿತಿಗಳಿಗೆ ಸದಸ್ಯರುಗಳನ್ನಾಗಿ ನೇಮಕ ಮಾಡಬಹುದಾಗಿದೆ. ವಿಶ್ವವಿದ್ಯಾನಿಲಯವು ರಚಿಸಲ್ಪಡುವ ಕೆಲವೊಂದು ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸರ್ಕಾರವು ಆದೇಶ ನೀಡಿದರೆ ಮುಂದಿನ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.<br><br>ಸಿಂಡಿಕೇಟ್ ಸದಸ್ಯರಾದ ಶ್ರೀ ಕುಮಾರ ಇವರು ಮಾತನಾಡಿ, ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ವಿಶ್ವವಿದ್ಯಾನಿಲಯವು ರಚಿಸುವ ಕೆಲವೊಂದು ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರುಗಳಾದ ಪ್ರತಿಯೊಬ್ಬರಿಗೂ ಒಂದೊಂದು ಸಮಿತಿಗೆ ಸದಸ್ಯರಾಗಿ ನೇಮಕ ಮಾಡಬೇಕೆಂದು ತಿಳಿಸಿದರು.<br>ಇದಕ್ಕೆ ಮಾನ್ಯ ಕುಲಪತಿಯವರು ಸಮ್ಮತಿಸಿದರು.<br>ಶ್ರೀ ಎಸ್.ಡಿ.ದೊಡ್ಡಚಾರಿ ಹಾಗೂ ಡಾ. ಎಂ.ಎಸ್.ದಾಮೋದರರವರು, ಕಾಲೇಜು ಅಭಿವೃದ್ಧಿ ಮಂಡಳಿಗೆ ನಿರ್ದೇಶಕರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿರಿಸಿಕೊಂಡು 2021-22ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣ, ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ಸಂಯೋಜನೆ ನವೀಕರಣ, ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ, ಶಿಕ್ಷಣ ಕಾಲೇಜುಗಳ ಸಂಯೋಜನೆ ನವೀಕರಿಸಲು ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ನಿಯಮಾನುಸಾರ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2020/12.5 | ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗೆಗೆ |
| | ಡಾ. ಈ.ಸಿ.ನಿಂಗರಾಜ್‌ಗೌಡರವರು ಮಾತನಾಡಿ, ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳು/ಕಛೇರಿಗಳಿಂದ ಮಾಹಿತಿಯನ್ನು ಪಡೆದು ಕ್ರೋಢೀಕರಿಸಿ |

| | |
|---|---|
| | ಸಿದ್ಧಪಡಿಸಿರುವ ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ವರದಿಯ ಸಿಡಿಯನ್ನು ಪರಿಶೀಲಿಸಿದ್ದು, ಕೆಲವು ಮಾಹಿತಿಗಳು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ಸದರಿ ವಾರ್ಷಿಕ ವರದಿಯನ್ನು ಪುನರ್ ಪರಿಶೀಲಿಸಿ (review) ನಂತರ ಸರ್ಕಾರಕ್ಕೆ ಕಳುಹಿಸುವುದು ಸೂಕ್ತವೆಂದು ಸಭೆಗೆ ತಿಳಿಸಿದರು.<br>ಮಾನ್ಯ ಕುಲಪತಿಯವರು ಸದಸ್ಯರ ಸಲಹೆಯನ್ನು ಪುರಸ್ಕರಿಸಿ, ಮೈಸೂರು ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ವರದಿಯಲ್ಲಿನ ಮಾಹಿತಿಯನ್ನು ಪುನರ್‌ಪರಿಶೀಲಿಸಬೇಕೆಂದು ಪ್ರೊ.ಡಿ.ಆನಂದ್‌ರವರಿಗೆ ಸೂಚಿಸಿದರು ಮತ್ತು ಪುನರ್ ಪರಿಶೀಲಿಸಿದ ನಂತರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದೆಂದು ಸಭೆಗೆ ತಿಳಿಸಿದರು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 50(1)ರ ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ವರದಿಯನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ಸರ್ಕಾರಕ್ಕೆ ಕಳುಹಿಸಲು ಸಭೆಯಲ್ಲಿ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2020/12.6 | "ಶ್ರೀ ರಾಮುಲು-ಯಶೋದಮ್ಮ" ಸ್ಮರಣಾರ್ಥ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ, ಪ್ರಕರಣ 31(2) (IX) ಪ್ರಕಾರ, ಡಾ.ಎಸ್.ಗುರುಮೂರ್ತಿ, #547, 'ಅನನ್ಯ' 69ನೇ ಕ್ರಾಸ್, 14ನೇ ಮುಖ್ಯರಸ್ತೆ, 1ನೇ ಸ್ಟೇಜ್, ಕುಮಾರಸ್ವಾಮಿ ಲೇಔಟ್, ಬೆಂಗಳೂರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀ ರಾಮುಲು-ಯಶೋದಮ್ಮ" ಸ್ಮರಣಾರ್ಥ ಎರಡು ಚಿನ್ನದ ಪದಕಗಳನ್ನು ಸ್ಥಾಪನೆ ಮಾಡಲು ತಲಾ ರೂ.2,00,000/-ಗಳಂತೆ ಒಟ್ಟು ರೂ.4,00,000/-ಗಳ ಡಿ.ಡಿ. ನೀಡಿದ್ದು, ತಮ್ಮ ನಿಬಂಧನೆಯಲ್ಲಿ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು 1. ಸ್ನಾತಕ ಪದವಿಯ ಬಿ.ಎಸ್ಸಿ. ರಸಾಯನಶಾಸ್ತ್ರ ಮತ್ತು 2. ಸ್ನಾತಕೋತ್ತರ ಪದವಿಯ ಎಂ.ಎಸ್ಸಿ.ರಸಾಯನಶಾಸ್ತ್ರ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಅತಿ ಹೆಚ್ಚು ಅಂಕಗಳಿಸಿ ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕಗಳನ್ನು ನೀಡುವ ಸಂಬಂಧ "ಶ್ರೀ ರಾಮುಲು-ಯಶೋದಮ್ಮ" ಅವರ ಹೆಸರಿನಲ್ಲಿ ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| ಸಾಮಾನ್ಯ ಸಭೆ 2020/12.7 | ಅಧ್ಯಾಪಕೇತರ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿನಿಯಮವನ್ನು ಪರಿಷ್ಕರಿಸುವ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕೇತರ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿನಿಯಮವನ್ನು ಪರಿಷ್ಕರಿಸುವ ಸಂಬಂಧ, ಈ ಕೆಳಕಂಡಂತೆ ಚರ್ಚಿಸಿ, ನಿರ್ಣಯವನ್ನು ಕೈಗೊಳ್ಳಲಾಯಿತು.<br>1. ಶ್ರೀಮತಿ. ಪವಿತ್ರ.ವೈ.ಕೆ ರವರು ಮಾತನಾಡಿ, ಸರ್ಕಾರದಿಂದ ಮಂಜೂರಾಗಿರುವ 09 ಉಪಕುಲಸಚಿವರ ಹುದ್ದೆಗಳಲ್ಲಿ 03 ಉಪಕುಲಸಚಿವ ಹುದ್ದೆಗಳಿಗೆ ಅಧ್ಯಾಪಕ ವೃಂದದವರನ್ನು ನೇಮಕ ಮಾಡಿ, ಉಳಿದ 06 ಉಪಕುಲಸಚಿವ ಹುದ್ದೆಗಳಿಗೆ ಅಧ್ಯಾಪಕೇತರ ವೃಂದದವರಿಗೆ ಮೀಸಲಿರಿಸುವುದು ಸೂಕ್ತವೆಂದರು ಹಾಗೂ ಪದವಿಯಲ್ಲಿ ತೇರ್ಗಡೆ ಹೊಂದಿರುವವರನ್ನು ಉಪಕುಲಸಚಿವ ಹುದ್ದೆಯ ಪದೋನ್ನತಿಗೆ ಪರಿಗಣಿಸಬೇಕೆಂದು ತಿಳಿಸಿದರು.<br>2. ಪ್ರೊ. ಡಿ.ಆನಂದ್ ಅವರು ಮಾತನಾಡಿ, 08 ಉಪಕುಲಸಚಿವ ಹುದ್ದೆಗಳಲ್ಲಿ ಅಧ್ಯಾಪಕೇತರುಗಳನ್ನು ಮೀಸಲಿಟ್ಟು, ಉಳಿದ 01 ಹುದ್ದೆಯನ್ನು ಅಧ್ಯಾಪಕ ವೃಂದದವರಿಗೆ ಮಾನ್ಯ ಕುಲಪತಿಯವರ ವಿವೇಚನಾಧಿಕಾರದಲ್ಲಿ ನೇಮಕ ಮಾಡುವುದು ಸೂಕ್ತವೆಂದು ಅಭಿಪ್ರಾಯಿಸಿದರು. ಈ ಪ್ರಸ್ತಾವನೆಯನ್ನು ಡಾ. ಚೈತ್ರ ನಾರಾಯಣರವರು ಸಹ ಬೆಂಬಲಿಸಿದರು. |

| | |
|---|---|
| | 3. ಡಾ. ಎಂ.ಎಸ್.ದಾಮೋದರ್‌ರವರು ಮಾತನಾಡಿ ವಿಶ್ವವಿದ್ಯಾನಿಲಯದ ಎಲ್ಲಾ ಉಪಕುಲಸಚಿವ ಹುದ್ದೆಗಳನ್ನು ಅಧ್ಯಾಪಕೇತರ ವೃಂದದವರಿಗೆ ಮೀಸಲಿಡುವುದು ಸೂಕ್ತವೆಂದು ಸಭೆಗೆ ತಿಳಿಸಿದರು.<br>4. ಡಾ. ಈ.ಸಿ.ನಿಂಗರಾಜ್‌ಗೌಡರವರು ಮಾತನಾಡಿ, ಅಧ್ಯಾಪಕೇತರ ವೃಂದದ ಉಪಕುಲಸಚಿವ ಹುದ್ದೆ ನೀಡಿದಲ್ಲಿ ಕೆಲವರಿಗೆ knowledge ಇರುವುದಿಲ್ಲ. ಆದ್ದರಿಂದ, ಅಧ್ಯಾಪಕ ವೃಂದದವರನ್ನು Special Officer ಆಗಿ ನೇಮಕ ಮಾಡಿಕೊಂಡು, ಅವರ ಮಾರ್ಗದರ್ಶನದಲ್ಲಿ ಅಧ್ಯಾಪಕೇತರ ವೃಂದದವರು ಕಾರ್ಯನಿರ್ವಹಿಸುವುದು ಅಥವಾ ಶೇ.25ರಷ್ಟು ಹುದ್ದೆಯನ್ನು ನೇರ ನೇಮಕಾತಿ ಮುಖಾಂತರ ನೇಮಕ ಮಾಡಿಕೊಳ್ಳುವುದು ಸೂಕ್ತವೆಂದರು.<br>ಇದಕ್ಕೆ ಮಾನ್ಯ ಕುಲಪತಿಯವರು ಮಾತನಾಡಿ, ಶೇ.25 ರಷ್ಟು ಹುದ್ದೆಯನ್ನು ಅವಶ್ಯಕತೆಯಿದ್ದಲ್ಲಿ ನೇರ ನೇಮಕಾತಿ ಮುಖಾಂತರ ನೇಮಕ ಮಾಡುವ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ಸರ್ಕಾರದಿಂದ ಆದೇಶ ಬರುವವರೆಗೆ ಜೇಷ್ಠತಾ ಪಟ್ಟಿಯಲ್ಲಿ ಹಿರಿತನವಿರುವ ಉದ್ಯೋಗಿಗಳನ್ನು ಪದೋನ್ನತಿಗೆ ಪರಿಗಣಿಸಿ ನೇಮಕ ಮಾಡಲಾಗುವುದೆಂದು ತಿಳಿಸಿದರು.<br>ಡಾ. ಈ.ಸಿ.ನಿಂಗರಾಜ್‌ಗೌಡರವರು ಮುಂದುವರೆದು ಮಾತನಾಡುತ್ತಾ, ವಿಶ್ವವಿದ್ಯಾನಿಲಯದಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ: 967 ಕುಲಸಚಿವರು ನೀಡಿರುವ ಮಾಹಿತಿಯಲ್ಲಿ 774 ಹುದ್ದೆಗಳಿವೆ. ಇವುಗಳಲ್ಲಿ ಯಾವುದು ಸರಿಯಾದ ಸಂಖ್ಯೆಯಾಗಿದೆ ಎಂದು ಸಭೆಯನ್ನು ಕೋರಿದರು.<br>ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯ-ದಲ್ಲಿರುವ ಎಲ್ಲಾ ತಾತ್ಕಾಲಿಕ ಉದ್ಯೋಗಿಗಳನ್ನು ಬಿಡುಗಡೆ ಮಾಡಿ, 2 ದಿನಗಳ ಹಿಂದೆ ಮರು ನೇಮಕಾತಿ ಆದೇಶ ನೀಡಲಾಗಿದೆ ಮತ್ತು ವಿಶ್ವವಿದ್ಯಾನಿಲಯದಲ್ಲಿ ಇನ್ನು ಕೆಲವು ವಿಭಾಗ/ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದು, ಆ ವಿಭಾಗದಲ್ಲಿ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಸುವ ಸಂಬಂಧ ಮಂಜೂರಾದ ಹುದ್ದೆಗಳು ಇಲ್ಲದಿದ್ದರೂ ಹೆಚ್ಚುವರಿಯಾಗಿ ಉದ್ಯೋಗಿಗಳನ್ನು ನೇಮಕ ಮಾಡಲಾಗಿದೆ. ಆದ್ದರಿಂದ ತಾವು ಕೋರಿರುವ ಸ್ಪಷ್ಟ ಮಾಹಿತಿಯನ್ನು ಸದ್ಯದಲ್ಲೆ ಒದಗಿಸಲಾಗುವುದೆಂದು ತಿಳಿಸಿದರು.<br>5. ಶ್ರೀ ಆರ್ ಪ್ರದೀಪ್‌ಕುಮಾರ ದೀಕ್ಷಿತ್ ಅವರು ಮಾತನಾಡಿ, ಅಧ್ಯಾಪಕರುಗಳಿಗೆ ಯುಜಿಸಿ ವೇತನ ಹಾಗೂ ಸಿಎಎಸ್ ಅಡಿಯಲ್ಲಿ ಪದೋನ್ನತಿ ಸಿಗುತ್ತದೆ. ಆದರೆ, ಅಧ್ಯಾಪಕೇತರ ವೃಂದದವರಿಗೆ ಜೇಷ್ಠತಾ ಆಧಾರದ ಪದೋನ್ನತಿ ಹೊರತುಪಡಿಸಿದರೆ, ಇನ್ಯಾವುದೇ ಪದೋನ್ನತಿ ಸಿಗುವ ಅವಕಾಶವಿಲ್ಲದಿರುವ ಕಾರಣ ಮಂಜೂರಾಗಿರುವ ಎಲ್ಲಾ ಉಪಕುಲಸಚಿವ ಹುದ್ದೆಗಳನ್ನು ಅಧ್ಯಾಪಕೇತರ ವೃಂದದವರಿಗೆ ನೀಡುವುದು ಸೂಕ್ತವೆಂದು ತಿಳಿಸಿದರು.<br>6. ಪುಟ ಸಂಖ್ಯೆ: 16ರಲ್ಲಿ M.Tech in Materials Science ವಿಭಾಗದ Staff required ನಲ್ಲಿ ಅಧ್ಯಾಪಕೇತರ ನೌಕರರಲ್ಲಿ ಲ್ಯಾಬ್ ಟೆಕ್ನೀಷಿಯನ್ ಅಥವಾ ಲ್ಯಾಬ್ ಅಸಿಸ್ಟಂಟ್ ಹುದ್ದೆಗಳಲ್ಲಿ ಯಾವುದಾದರು ಒಂದರ ಬದಲು ಲೈಬ್ರರಿ ಅಸಿಸ್ಟೆಂಟ್ ರನ್ನು ನೇಮಕ ಮಾಡಬೇಕೆಂದು ಮಾನ್ಯ ಸದಸ್ಯರಾದ ಡಾ.ಈ.ಸಿ.ನಿಂಗರಾಜೇ ಗೌಡ ಸಭೆಯನ್ನು ಕೋರಿದರು. ಈ ಪ್ರಸ್ತಾವನೆಗೆ ಮಾನ್ಯ ಕುಲಪತಿಯವರು ಮಾತನಾಡಿ, ಲ್ಯಾಬ್ ಟೆಕ್ನೀಷಿಯನ್, ಲ್ಯಾಬ್ ಅಸಿಸ್ಟಂಟ್ ಹಾಗೂ ಲೈಬ್ರರಿ ಅಸಿಸ್ಟಂಟ್ ಹುದ್ದೆಗಳ ವೇತನ ಶ್ರೇಣಿಗಳು ಒಂದೇ ಆಗಿದ್ದರೆ, ಲ್ಯಾಬ್ ಅಸಿಸ್ಟಂಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಹುದ್ದೆಯಲ್ಲಿ ಒಂದನ್ನು ತೆಗೆದುಹಾಕಿ ಲೈಬ್ರರಿ ಅಸಿಸ್ಟಂಟ್ ಹುದ್ದೆಯನ್ನು ಸೇರ್ಪಡೆಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |

| | |
|---|---|
| | ಉಪಕುಲಸಚಿವರ ಹುದ್ದೆಗಳನ್ನು ಅಧ್ಯಾಪಕೇತರ ವೃಂದದವರಿಗೆ 09 ಹುದ್ದೆಗಳನ್ನು ಮೀಸಲಿಡುವ ಸಂಬಂಧ ಸದಸ್ಯರುಗಳ ಅಭಿಪ್ರಾಯ ಹಾಗೂ ಸಲಹೆಗಳನ್ನು ಆಲಿಸಿದ ಮಾನ್ಯ ಕುಲಪತಿಯವರು, ನಂತರ ಮಾತನಾಡುತ್ತಾ, ಉಪಕುಲಸಚಿವ ಹುದ್ದೆಯಲ್ಲಿನ ವೇತನವು ಅಧ್ಯಾಪಕ ಹುದ್ದೆಯಲ್ಲಿನ ವೇತನಕ್ಕಿಂತ ಕಡಿಮೆಯಾಗಿದ್ದು, ಸದರಿ ಹುದ್ದೆಗೆ ಅಧ್ಯಾಪಕರನ್ನು ನೇಮಕ ಮಾಡಿದರೆ ಉಪಕುಲಸಚಿವರು ಪಡೆಯುತ್ತಿರುವ ವೇತನವನ್ನೆ ಪಡೆಯಬೇಕೆಂದು ಸುಮಾರು ವರ್ಷಗಳಿಂದ ಆಡಿಟ್ ಆಕ್ಷೇಪಣೆಯಾಗುತ್ತಿದೆ. ಅಧ್ಯಾಪಕರುಗಳಿಗೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ಹಲವು ಅವಕಾಶಗಳಿವೆ ಮತ್ತು ಸಿಎಎಸ್ ಮುಖಾಂತರ ಪದೋನ್ನತಿ ನೀಡಲಾಗುತ್ತದೆ. ಆದರೆ, ಅಧ್ಯಾಪಕೇತರ ವೃಂದದವರಿಗೆ ಜೇಷ್ಠತಾ ಆಧಾರದ ಮೇಲೆ ಮಾತ್ರ ಪದೋನ್ನತಿ ನೀಡಲಾಗುವುದರಿಂದ, ಸರ್ಕಾರದಿಂದ ಮಂಜೂರಾಗಿರುವ 09 ಉಪಕುಲಸಚಿವ ಹುದ್ದೆಗಳನ್ನು ಮೀಸಲಿರಿಸುವುದು ಸೂಕ್ತವೆಂದರು. ಮುಂದುವರೆದು, ವಿಶ್ವವಿದ್ಯಾನಿಲಯದ ಪ್ರಮುಖ ವಿಭಾಗಗಳಿಗೆ ಅಧ್ಯಾಪಕರನ್ನು ಪೂರ್ಣಕಾಲಿಕ ಅವಧಿಗೆ ನೇಮಕ ಮಾಡುವ ಬದಲು ಬೋಧನಾ ಕಾರ್ಯಭಾರದೊಂದಿಗೆ ಹೆಚ್ಚುವರಿಯಾಗಿ ವಿಶೇಷಾಧಿಕಾರಿಗಳಾಗಿ ಆಗಿ ನೇಮಕ ಮಾಡಿಕೊಂಡು, ಅವರ ಮಾರ್ಗದರ್ಶನದಲ್ಲಿ ಅಧ್ಯಾಪಕೇತರ ವೃಂದದವರಿಂದ ಕಾರ್ಯನಿರ್ವಹಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮತ್ತು ಕರಡು ಅಧಿನಿಯಮ ರಚನಾ ಸಮಿತಿಯು ಕೂಲಂಕಷವಾಗಿ ಚರ್ಚಿಸಿ ಸಲ್ಲಿಸಿದ ಅಧಿನಿಯಮವನ್ನು ದಿನಾಂಕ 5-12-2020ರಂದು ನಡೆದ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತು ಸಹ ಅನುಮೋದಿಸಿ ಶಿಫಾರಸ್ಸು ಮಾಡಿರುತ್ತದೆಂದು ಸಭೆಗೆ ತಿಳಿಸಿದರು. ಅಂತಿಮವಾಗಿ, ಈ ಪ್ರಸ್ತಾವನೆಗೆ ಸಿಂಡಿಕೇಟ್ ಸದಸ್ಯರುಗಳು ಸಮ್ಮತಿ ಸೂಚಿಸಿದರು. |
| **ತೀರ್ಮಾನ** | ಕರಡು ಅಧಿನಿಯಮ ರಚನಾ ಸಮಿತಿ ಸಭೆಯ ಶಿಫಾರಸ್ಸಿನನ್ವಯ ಹಾಗೂ ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 41(1)ರನ್ವಯ ಪರಿಷ್ಕರಿಸಲಾಗಿರುವ ಅಧ್ಯಾಪಕೇತರ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು ಅಧಿನಿಯಮವನ್ನು ಶಿಫಾರಸ್ಸು ಮಾಡಿ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2020/12.8 | ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| **ತೀರ್ಮಾನ** | ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನಿಯಮಾನುಸಾರ ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2020/12.9 | ಮನ:ಶಾಸ್ತ್ರ, ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ, ಭೌತಶಾಸ್ತ್ರ, ಸೂಕ್ಷ್ಮಜೀವಾಣುಶಾಸ್ತ್ರ, ಸಂಸ್ಕೃತ ಮತ್ತು ಸಮಾಜಶಾಸ್ತ್ರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳನ್ನು ನೇಮಿಸಲು ಸಿಂಡಿಕೇಟಿನ ಅನುಮೋದನೆಗಾಗಿ. |
| | ಮಾನ್ಯ ಕುಲಪತಿಯವರು ಮಾತನಾಡಿ, ಮನ:ಶಾಸ್ತ್ರ, ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ ಮತ್ತು ಸೂಕ್ಷ್ಮಜೀವಾಣುಶಾಸ್ತ ಅಧ್ಯಯನ ವಿಭಾಗಗಳಲ್ಲಿ ಅಧ್ಯಕ್ಷರ ಅವಧಿಯು ಮುಕ್ತಾಯಗೊಳ್ಳುತ್ತಿದ್ದು, ಜೇಷ್ಠತಾ ಪಟ್ಟಿಯ ಪ್ರಕಾರ ಹಿರಿಯ ಪ್ರಾಧ್ಯಾಪಕರುಗಳನ್ನು ನೇಮಕ ಮಾಡಲಾಗುತ್ತಿದೆ.<br><br>ಭೌತಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರೊ.ಎನ್.ಕೆ.ಲೋಕನಾಥ್ ಇವರ ಅಧ್ಯಕ್ಷರ ಅವಧಿಯು ದಿನಾಂಕ: 07-02-2021ಕ್ಕೆ ಮುಕ್ತಾಯಗೊಳ್ಳುತ್ತಿದೆ. ಇವರ ನಂತರ ಜೇಷ್ಠತಾ ಪಟ್ಟಿಯ ಪ್ರಕಾರ ಪ್ರೊ.ಎ.ಪಿ.ಜ್ಞಾನ ಪ್ರಕಾಶ್ ಅವರು ಹಿರಿಯರಾಗಿರುತ್ತಾರೆ. ಪ್ರಸ್ತುತ ಪ್ರೊ.ಎ.ಪಿ.ಜ್ಞಾನ ಪ್ರಕಾಶ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ)ರಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ, ತದನಂತರ ಹಿರಿಯ ಪ್ರಾಧ್ಯಾಪಕರಾಗಿರುವ ಪ್ರೊ.ಎಂ.ಎಸ್.ಚಂದ್ರಶೇಖರ ಅವರಿಗೆ ಭೌತಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತಿದೆ. |

ಪ್ರೊ. ಎಂ.ಎಸ್.ಚಂದ್ರಶೇಖರವರ ಅಧ್ಯಕ್ಷರ ಅವಧಿಯು ಮುಕ್ತಾಯಗೊಂಡ ನಂತರ ಹಿರಿತನವನ್ನು ಪರಿಗಣನೆಗೆ ತೆಗೆದುಕೊಂಡು ಪ್ರೊ.ಎ.ಪಿ.ಜ್ಞಾನ ಪ್ರಕಾಶ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. ಈ ಪ್ರಸ್ತಾವನೆಗೆ ಶ್ರೀ ಎಸ್.ಡಿ.ದೊಡ್ಡಚಾರಿ ಹಾಗೂ ಡಾ. ಎಂ.ಎಸ್.ದಾಮೋದರ ದನಿಗೂಡಿಸಿದರು. ಇದಕ್ಕೆ ಸಭೆಯು ಸಮ್ಮತಿ ಸೂಚಿಸಿತು.

ಸಂಸ್ಕೃತ ಅಧ್ಯಯನ ವಿಭಾಗದ ಅಧ್ಯಕ್ಷರಾಗಿರುವ ಪ್ರೊ.ನಾರಾಯಣ ಭಟ್ ಇವರು ದಿನಾಂಕ: 28-02-2021ರಂದು ಸೇವೆಯಿಂದ ವಯೋನಿವೃತ್ತಿ ಹೊಂದುತ್ತಿದ್ದು, ಈ ವಿಭಾಗದಲ್ಲಿ ಇವರನ್ನು ಬಿಟ್ಟು ಬೇರೆ ಯಾರು ಖಾಯಂ ಪ್ರಾಧ್ಯಾಪಕರಾಗಲೀ/ಸಹ ಪ್ರಾಧ್ಯಾಪಕರಾಗಲೀ ಇರುವುದಿಲ್ಲ. ಆದುದರಿಂದ, ವಿಶ್ವವಿದ್ಯಾನಿಲಯದ ಕಾಯ್ದೆಯನ್ವಯ ಕಲಾ ನಿಕಾಯದ ಡೀನರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದು. ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರೊ.ನಾರಾಯಣ ಭಟ್ ಇವರನ್ನು ವಿಶೇಷ ಆಹ್ವಾನಿತ ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಲಾಗುವುದೆಂದು ತಿಳಿಸಿದರು. ಮುಂದುವರೆದು ಮಾತನಾಡಿ, ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿಯೂ ಪ್ರೊ.ಯಶೋಧ ಇವರನ್ನು ಬಿಟ್ಟು ಬೇರೆ ಯಾರು ಖಾಯಂ ಪ್ರಾಧ್ಯಾಪಕರಾಗಲೀ/ಸಹ ಪ್ರಾಧ್ಯಾಪಕರಾಗಲೀ ಇರುವುದಿಲ್ಲವಾದ್ದರಿಂದ, ಇವರ ಅಧ್ಯಕ್ಷರ ಅವಧಿಯು 27-02-2021ಕ್ಕೆ ಮುಕ್ತಾಯಗೊಂಡರೂ ಸಹ ಮತ್ತೊಮ್ಮೆ ದಿನಾಂಕ: 28-02-2021ರಿಂದ ಜಾರಿಗೆ ಬಂದಂತೆ ಅಥವಾ ಮುಂದಿನ ಆದೇಶದವರೆಗೆ ಪ್ರೊ.ಎಸ್.ಯಶೋಧ ಅವರನ್ನೇ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

**ತೀರ್ಮಾನ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರನ್ವಯ ಎರಡು ವರ್ಷಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಅಧ್ಯಕ್ಷರ ನೇಮಕಾತಿಗೆ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮಾರ್ಗಸೂಚಿಯನುಸಾರ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವವರ ನಂತರ ಅರ್ಹರಾಗಿರುವ ಹಿರಿಯ ಪ್ರಾಧ್ಯಾಪಕರುಗಳನ್ನು ಈ ಕೆಳಗಿನ ಅಧ್ಯಯನ ವಿಭಾಗಗಳಿಗೆ ಅವರ ಹೆಸರುಗಳ ಮುಂದೆ ಸೂಚಿಸಿರುವ ದಿನಾಂಕದಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು.

| ಕ್ರ. ಸಂ. | ಅಧ್ಯಯನ ವಿಭಾಗ | ಅಧ್ಯಕ್ಷರಾಗಿ ನೇಮಕವಾದವರು | ಜಾರಿಗೆ ಬರುವ ದಿನಾಂಕ |
|---|---|---|---|
| 1 | ಮನಃಶಾಸ್ತ್ರ | ಪ್ರೊ. ಜಿ.ವೆಂಕಟೇಶ್‌ಕುಮಾರ್ | 01-01-2021 |
| 2 | ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ | ಪ್ರೊ. ನಿರಂಜನ | 01-02-2021 |
| 3 | ಭೌತಶಾಸ್ತ್ರ | ಪ್ರೊ. ಎಂ.ಎಸ್.ಚಂದ್ರಶೇಖರ | 08-02-2021 |
| 4 | ಸೂಕ್ಷ್ಮಜೀವಾಣುಶಾಸ್ತ್ರ | ಡಾ. ಎಸ್.ಸತೀಶ್ | 08-02-2021 |
| 5 | ಸಂಸ್ಕೃತ | ಡೀನರು, ಕಲಾ ನಿಕಾಯ | 01-03-2021 |
| 6 | ಸಮಾಜಶಾಸ್ತ್ರ | ಪ್ರೊ. ಯಶೋಧ | 28-02-2021 |

| | |
|---|---|
| ಸಾಮಾನ್ಯ ಸಭೆ 2020/12.10 | ಆಚಾರ್ಯ ಇನ್ಸ್ಟಿಟ್ಯೂಟ್ ಫಾರ್ ಇನೋವೇಶನ್ ಅಂಡ್ ಟ್ರಾನ್ಸ್ಫರ್ಮೇಶನ್, ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಸಂಸ್ಥೆಗೆ Specialized Programme ಅಡಿಯಲ್ಲಿ B.Voc. (Digital Architecture) ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ನೀಡಿರುವ ಸಂಬಂಧ ಅನುಮೋದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | ಆಚಾರ್ಯ ಇನ್ಸ್ಟಿಟ್ಯೂಟ್ ಫಾರ್ ಇನೋವೇಶನ್ ಅಂಡ್ ಟ್ರಾನ್ಸ್ಫರ್ಮೇಶನ್, ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಸಂಸ್ಥೆಗೆ Specialized Programme ಅಡಿಯಲ್ಲಿ 40 ವಿದ್ಯಾರ್ಥಿಗಳ ಸಂಖ್ಯಾಮಿತಿಯೊಂದಿಗೆ B.Voc. (Digital Architecture) ಕೋರ್ಸ್‌ನ್ನು 2020-21ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಅನುಮತಿ ನೀಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2020/12.11 | ಉತ್ತರ ಪತ್ರಿಕೆಗಳ ಸರಬರಾಜು ಮಾಡಿರುವ ಹುಂಡಿಯ ಮೊತ್ತದಲ್ಲಿ ಶೇ.25 ಕಡಿತಗೊಳಸಿರುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಮೆ: ಮದ್ದಾಲ ಇಂಡಸ್ಟ್ರೀಸ್, ಗುಂಟೂರು ಇವರಿಗೆ ಅಕ್ಟೋಬರ್/ನವೆಂಬರ್ 2019ರ ಪದವಿ ಪರೀಕ್ಷೆಗಳಿಗೆ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿತ್ತು. ಸದರಿಯವರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕಾಲೇಜುಗಳಿಗೆ ಸರಬರಾಜು ಮಾಡಲು ಮುದ್ರಿಸಿಕೊಟ್ಟ ಉತ್ತರ ಪತ್ರಿಕೆಗಳಲ್ಲಿ ಹಲವು ನ್ಯೂನತೆಗಳು ಕಂಡು ಬಂದಿರುವ ಹಿನ್ನೆಲೆಯಲ್ಲಿ, ಮೆ: ಮದ್ದಾಲ ಇಂಡಸ್ಟ್ರೀಸ್, ಗುಂಟೂರು ಇವರು ಸಲ್ಲಿಸಿರುವ ಒಟ್ಟು ಮೊತ್ತದಲ್ಲಿ ಶೇ. 25ರಷ್ಟು ಮೊತ್ತವನ್ನು ಕಡಿತಗೊಳಿಸಿ ಹುಂಡಿಯನ್ನು ಪಾವತಿಸಲಾಯಿತು. ಸದರಿ ಸಂಸ್ಥೆಯವರು ಕಡಿತಗೊಳಸಿರುವ ಶೇ.25ರಷ್ಟು ಮೊತ್ತವನ್ನು ಹಿಂದಿರುಗಿಸುವಂತೆ ಮನವಿ ಸಲ್ಲಿಸಿರುತ್ತಾರೆ. ಆದುದರಿಂದ, ಶೇ.5 ರಷ್ಟನ್ನು ಕಡಿತಗೊಳಿಸಿ ಉಳಿದ ಶೆ.20ರಷ್ಟನ್ನು ಹಿಂದಿರುಗಿಸಲು ಸಭೆಯು ತಮ್ಮ ಅಭಿಪ್ರಾಯ ಸೂಚಿಸಬೇಕೆಂದು ತಿಳಿಸಿದರು.<br><br>ಶ್ರೀ ಎಸ್.ಡಿ.ದೊಡ್ಡಚಾರಿ ಅವರು ಮಾತನಾಡಿ, ಮೆ: ಮದ್ದಾಲ ಇಂಡಸ್ಟ್ರೀಸ್, ಗುಂಟೂರು ಸಂಸ್ಥೆಯು ಸರಬರಾಜು ಮಾಡಿರುವ ಉತ್ತರ ಪತ್ರಿಕೆಗಳಲ್ಲಿ ಹಲವು ನ್ಯೂನತೆಗಳು ಕಂಡು ಬಂದಿರುವುದರಿಂದ ಶೇ.25ರಷ್ಟನ್ನೇ ಕಡಿತಗೊಳಸಿರುವುದು ಸರಿಯಾದ ಕ್ರಮವೆಂದು ತಿಳಿಸಿದರು.<br><br>ಈ ಸಂಬಂಧ ಸುದೀರ್ಘವಾದ ಚರ್ಚಿಸಿದ ಸಭಾ ಸದಸ್ಯರುಗಳು ಅಂತಿಮವಾಗಿ ಶೇ.10ರಷ್ಟನ್ನು ಕಡಿತಗೊಳಸಲು ಸಮ್ಮತಿಸಿದರು. |
| ತೀರ್ಮಾನ | ಮೆ: ಮದ್ದಾಲ ಇಂಡಸ್ಟ್ರೀಸ್, ಗುಂಟೂರು ಇವರು ಸಲ್ಲಿಸಿರುವ ಹುಂಡಿಯ ಒಟ್ಟು ಮೊತ್ತದಲ್ಲಿ ಶೇ.25ರ ಬದಲಗೆ ಶೇ.10 ರಷ್ಟನ್ನು ಕಡಿತಗೊಳಿಸಿ ಪಾವತಿಸಲು ಸಿಂಡಿಕೇಟ್ ಅನುಮೋದಿಸಿತು. |
| ಸಾಮಾನ್ಯ ಸಭೆ 2020/12.12 | ಸೇಂಟ್ ಜೋಸೆಫ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರಿಗೆ ಹೊಸದಾಗಿ Commerce ಮತ್ತು Management ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಿರುವ ಸಂಬಂಧ ಅನುಮೋದನೆ ಕೋರುವ ಬಗ್ಗೆ. |
| | ಡಾ. ಈ.ಸಿ.ಲಿಂಗರಾಜೇಗೌಡ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಪಡೆದು ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಶೋಧನಾ ವಿದ್ಯಾರ್ಥಿಗಳ ಹಾಗೂ ಮಾರ್ಗದರ್ಶಕರುಗಳ ಮಾಹಿತಿ ನೀಡಬೇಕೆಂದು ಒಂದು ತಿಂಗಳ ಹಿಂದೆಯೇ ಕುಲಸಚಿವರು ಹಾಗೂ ಕುಲಸಚಿವರು (ಪರೀಕ್ಷಾಂಗ)ರವರಿಗೆ ಕೋರಲಾಗಿತ್ತು. ಆದರೆ, ಇದುವರೆವಿಗೂ ಮಾಹಿತಿ ಸಲ್ಲಿಸಿರುವುದಿಲ್ಲವೆಂದು ತಿಳಿಸಿದರು. |

G. He[illegible]

| | |
|---|---|
| | ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ತಾವು ಕೋರಿರುವಂತೆ ಪೂರ್ಣ ಮಾಹಿತಿ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |
| ತೀರ್ಮಾನ | ಸೇಂಟ್ ಜೋಸೆಫ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರಿಗೆ ಹೊಸದಾಗಿ Commerce ಮತ್ತು Management ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2020/12.13 | ಸಿಎಎಸ್ ಅಡಿಯಲ್ಲಿ ಎಜಿಪಿ 7000, 8000 ಮತ್ತು 10000 ಹಂತದ ಪದೋನ್ನತಿ ಹೊಂದಿರುವ ಅಧ್ಯಾಪಕರುಗಳಿಗೆ Additional Increment ಗಳನ್ನು ಮಂಜೂರು ಮಾಡಿರುವ ಹಾಗೂ 7ನೇ ವೇತನ ಶ್ರೇಣಿಯ ಆರ್ಥಿಕ ಸೌಲಭ್ಯಗಳ ಬಗ್ಗೆ. |
| | ದಿನಾಂಕ: 31-12-2015ರೊಳಗೆ ಸಿಎಎಸ್ ಅಡಿಯಲ್ಲಿ ಎಜಿಪಿ 7000, 8000 ಮತ್ತು 10000 ಹಂತಕ್ಕೆ ಪದೋನ್ನತಿ ಹೊಂದಿರುವ ಅಧ್ಯಾಪಕರುಗಳಿಗೆ ಒಂದು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಲಾಗಿತ್ತು. ಆದರೆ, ದಿನಾಂಕ: 01-01-2016ರಿಂದ ಜಾರಿಗೆ ಬಂದಿರುವ 7ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಎಜಿಪಿ ಮಾದರಿ ಜಾರಿಯಲ್ಲಿರದ ಕಾರಣದಿಂದಾಗಿ, ದಿನಾಂಕ: 01-01-2016ರ ನಂತರ ಪದೋನ್ನತಿಗೆ ಅರ್ಹರಾದವರಿಗೂ ಸಹ ಎಜಿಪಿ ಮಾದರಿಯಲ್ಲಿಯೇ ಹೆಚ್ಚುವರಿ ವೇತನ ಬಡ್ತಿಯನ್ನು ನೀಡಲಾಗಿದೆ. ಈ ಕ್ರಮವು ಮುಂದಿನ ದಿನಗಳಲ್ಲಿ ಆಡಿಟ್ ಆಕ್ಷೇಪಣೆಗೊಳಪಡುವುದರಿಂದ 01-01-2016ರ ನಂತರ ಪದೋನ್ನತಿಗೆ ಅರ್ಹರಾದವರಿಗೆ ನೀಡಲಾಗಿರುವ ಹೆಚ್ಚುವರಿ ವೇತನ ಬಡ್ತಿಯ ಆರ್ಥಿಕ ಸೌಲಭ್ಯವನ್ನು ಪರಿಶೀಲಿಸಿ ಹಿಂಪಡೆಯುವುದು ಸೂಕ್ತವೆಂದು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು. ಈ ಪ್ರಸ್ತಾವನೆಗೆ ಶ್ರೀ ಮೂಗೇಶಪ್ಪ ಹಾಗೂ ಶ್ರೀ ದಿನೇಶ್ ಎಂ ಗಾವಂಕರ್ ದನಿಗೂಡಿಸಿದರು.<br><br>ಶ್ರೀ ಎಸ್.ಡಿ.ದೊಡ್ಡಬಾರಿ ಹಾಗೂ ಡಾ. ಚೈತ್ರ ನಾರಾಯಣ ಅವರುಗಳು ಮಾತನಾಡಿ, ದಿನಾಂಕ:01-01-2016ರಿಂದ ಜಾರಿಗೆ ಬಂದಿರುವ 7ನೇ ಪರಿಷ್ಕೃತ ವೇತನ ಶ್ರೇಣಿಯ Arrears ಹಾಗೂ ಪಿಂಚಣಿ ಸೌಲಭ್ಯಗಳನ್ನು ಪ್ರಾಧ್ಯಾಪಕರುಗಳಿಗೆ ತುರ್ತಾಗಿ ಮಂಜೂರು ಮಾಡಬೇಕೆಂದು ಸಭೆಯಲ್ಲಿ ಕೋರಿದರು.<br><br>ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಮಂಜೂರು ಮಾಡುವ ಅನುದಾನದಲ್ಲಿ ಪಿಂಚಣಿ ಸೌಲಭ್ಯಗಳನ್ನು ನೀಡುವುದಕ್ಕಾಗಿ ಹಣಕಾಸು ಅಧಿಕಾರಿಗಳೊಡನೆ ಸರ್ಕಾರಕ್ಕೆ ಭೇಟಿ ನೀಡಿ, ಅನುದಾನ ಬಿಡುಗಡೆ ಮಾಡಿಸಲು ಕ್ರಮತೆಗೆದುಕೊಳ್ಳಲಾಗಿದ್ದು, ಅನುದಾನ ಬಿಡುಗಡೆಯಾದ ಕೂಡಲೇ ಪಿಂಚಣಿ ಸೌಲಭ್ಯಗಳನ್ನು ನೀಡಲಾಗುವುದು ಹಾಗೂ ಹಣಕಾಸು ಶಾಖೆಯಲ್ಲಿ ಹಣಕಾಸು ಅಧಿಕಾರಿಗಳ ಅಧೀನದಲ್ಲಿ ಪ್ರಾಧ್ಯಾಪಕರುಗಳ ಸೇವಾ ಪುಸ್ತಕಗಳು ಮಾತ್ರ ಲಭ್ಯವಿದ್ದು, ಈಗಾಗಲೇ ಆ ಪ್ರಾಧ್ಯಾಪಕರುಗಳ 7ನೇ ಪರಿಷ್ಕೃತ ವೇತನ ಶ್ರೇಣಿಯ Arrears Statement ಸಿದ್ಧಪಡಿಸಲಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳನ್ನೊಳಗೊಂಡಂತೆ ಒಟ್ಟು 28 ಬಟವಾಡೆ ಅಧಿಕಾರಿಗಳಿದ್ದು, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರುಗಳ ಸೇವಾ ಪುಸ್ತಕಗಳು ಬಟವಾಡೆ ಅಧಿಕಾರಿಗಳ ಅಧೀನದಲ್ಲಿರುತ್ತದೆ. 03-01-2021ರ ನಂತರ ಎಲ್ಲಾ ಬಡವಾಡೆ ಅಧಿಕಾರಿಗಳ ಸಭೆ ಕರೆದು ಜನವರಿ 2021ರ ಅಂತ್ಯದೊಳಗೆ ಈಗಾಗಲೇ ಹಣಕಾಸು ಅಧಿಕಾರಿಗಳು ಕಳುಹಿಸಿರುವ ನಮೂನೆಯಲ್ಲಿ ಎಲ್ಲಾ ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರುಗಳ Arrears Statement ಸಿದ್ಧಪಡಿಸಿ ಹಣಕಾಸು ಶಾಖೆಗೆ ಕಳುಹಿಸಿ ಕೊಡಬೇಕೆಂದು ಸೂಚಿಸಲಾಗುವುದು. ತದನಂತರ, ಎಲ್ಲಾ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರುಗಳ Arrears Statement ಪುನರ್ ಪರಿಶೀಲಿಸಿ, 7ನೇ ಪರಿಷ್ಕೃತ ವೇತನ ಶ್ರೇಣಿಯ Arrears ನೀಡಲು ಕ್ರಮ ತೆಗೆದುಕೊಳ್ಳಲಾಗುವುದೆಂದು ಕುಲಪತಿಗಳು ಸಭೆಗೆ ತಿಳಿಸಿದರು. |
| **ತೀರ್ಮಾನ** | ಸಿಎಎಸ್ ಅಡಿಯಲ್ಲಿ ಎಜಿಪಿ 7000, 8000 ಮತ್ತು 10000 ಹಂತದ ಪದೋನ್ನತಿ ಹೊಂದಿರುವ ಅಧ್ಯಾಪಕರುಗಳಿಗೆ Additional Increment ಗಳನ್ನು ಮಂಜೂರು |

| | |
|---|---|
| | ಮಾಡಿರುವ ಹಾಗೂ 7ನೇ ವೇತನ ಶ್ರೇಣಿಯ ಆರ್ಥಿಕ ಸೌಲಭ್ಯಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಈ ಕೆಳಕಂಡ ಅಂಶಗಳ ಬಗ್ಗೆ ಕ್ರಮ ತೆಗೆದುಕೊಳ್ಳಲು ಸರ್ವಾನುಮತದಿಂದ ಅನುಮೋದಿಸಿತು.<br>ಎ) ಘನ ಸರ್ಕಾರದ ಆದೇಶದನ್ವಯ ಸಿಎಎಸ್ ಅಡಿಯಲ್ಲಿ ಪದೋನ್ನತಿ ಹೊಂದಿದ ಎಲ್ಲಾ ಅಧ್ಯಾಪಕರುಗಳಿಗೆ 7ನೇ ಪರಿಷ್ಕೃತ ವೇತನ ಶ್ರೇಣಿಯ ಆರ್ಥಿಕ ಸೌಲಭ್ಯಗಳನ್ನು ಒಟ್ಟಾರೆಯಾಗಿ ದಿನಾಂಕ: 16-03-2019ರಿಂದ ಜಾರಿಗೆ ಬಂದಂತೆ ಮಂಜೂರು ಮಾಡುವುದು;<br>ಬಿ) ಸಿಎಎಸ್ ಅಡಿಯಲ್ಲಿ ಪದೋನ್ನತಿ ಹೊಂದಿ ಒಂದು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡಿ ಆರ್ಥಿಕ ಸೌಲಭ್ಯವನ್ನು ದಿನಾಂಕ: 09-12-2019ರಿಂದ ನೀಡಿರುವ ಬಗ್ಗೆ ದಿನಾಂಕ: 09-12-2019ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಈ ಕೆಳಕಂಡಂತೆ ಭಾಗಶ: ಮಾರ್ಪಡಿಸುವುದು.<br>1. ದಿನಾಂಕ: 31-12-2015ರೊಳಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಪಡೆಯಲು ಅರ್ಹರಾದವರಿಗೆ ಮಾತ್ರ ಎಜಿಪಿ 7000, 8000 ಮತ್ತು 10000 ಹಂತದ ಪದೋನ್ನತಿಯ ಸಂಬಂಧ ಕಾಲ್ಪನಿಕವಾಗಿ ನಿಗದಿಪಡಿಸಲಾಗಿರುವ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಯಥಾಸ್ಥಿತಿ ಮುಂದುವರೆಸುವುದು.<br>ಮತ್ತು<br>2. ದಿನಾಂಕ: 01-01-2016ರಿಂದ ಜಾರಿಗೆ ಬಂದಿರುವ 7ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಎಜಿಪಿ ಮಾದರಿ ಜಾರಿಯಲ್ಲಿರದ ಕಾರಣದಿಂದಾಗಿ, ದಿ. 01-01-2016ರ ನಂತರ ಪದೋನ್ನತಿಗೆ ಅರ್ಹರಾದವರಿಗೆ ನೀಡಲಾಗಿರುವ ಹೆಚ್ಚುವರಿ ವೇತನ ಬಡ್ತಿಯ ಆರ್ಥಿಕ ಸೌಲಭ್ಯವನ್ನು ಪರಿಶೀಲಿಸಿ ಹಿಂಪಡೆಯುವುದು. |
| ಸಾಮಾನ್ಯ ಸಭೆ 2020/12.14 | ಪಿಹೆಚ್.ಡಿ ನಿಯಮಾವಳಿ 2017ರ ತಿದ್ದುಪಡಿಯನ್ನು ಮಾಡಿರುವ ಬಗ್ಗೆ. |
| | ಶ್ರೀ ಎಸ್.ಡಿ.ದೊಡ್ಡಚಾರಿ ಅವರು ಮಾತನಾಡಿ, ಎಂ.ಎ., ಎಂ.ಕಾಂ., ಎಂ.ಎಸ್ಸಿ ಸ್ನಾತಕೋತ್ತರ ವಿದ್ಯಾರ್ಥಿಗಳು ಪ್ರವೇಶಾತಿಗಾಗಿ ಪ್ರವೇಶ ಪರೀಕ್ಷೆ ಬರೆಯಬೇಕಾದರೆ ಇದಕ್ಕಿಂತ ಉನ್ನತ ಶಿಕ್ಷಣವಾದ ಎಂ.ಫಿಲ್ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಪಿಹೆಚ್.ಡಿ ಪ್ರವೇಶ ಪರೀಕ್ಷೆ ಬರೆಯಲು ಏಕೆ ಸಾಧ್ಯವಾಗುವುದಿಲ್ಲ ಹಾಗೂ The candidates who have been passed M.Phil course or may join through an entrance examination ಎಂದು ಯುಜಿಸಿ ಮಾರ್ಗಸೂಚಿಯಲ್ಲಿರುತ್ತದೆ ತಿಳಿಸಿದರು.<br>ಡಾ. ಈ.ಸಿ.ಲಿಂಗರಾಜೇ ಗೌಡ ಅವರು ಮಾತನಾಡಿ, ಹಿಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರೆಗ್ಯುಲರ್ ಎಂ.ಫಿಲ್ ಕೋರ್ಸ್‌ನ್ನು regular ಆಗಿ ವ್ಯಾಸಂಗ ಮಾಡಿರುವವರಿಗೆ ಪಿಹೆಚ್.ಡಿ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿತ್ತು. ಹಾಗೆಯೇ, ದೂರ ಶಿಕ್ಷಣ/ಖಾಸಗಿ ಸಂಸ್ಥೆಗಳಲ್ಲಿ ಎಂ.ಫಿಲ್ ಕೋರ್ಸ್‌ನ್ನು ಪೂರ್ಣಗೊಳಿಸಿರುವವರಿಗೆ ಪಿಹೆಚ್.ಡಿ ಪ್ರವೇಶ ಪರೀಕ್ಷೆ ಕಡ್ಡಾಯವಾಗಿತ್ತೆಂದು ತಿಳಿಸಿದರು.<br>Prof. Anand D., Dean, Faculty of Commerce & Management informed that we are under the impression that any UGC recognized institutions means one that fullfils all the requirements. It is implied that if entrance examination is compulsory as per UGC regulations, any admission without conducting entrance examination cannot be recognised.<br>ಡಾ. ಈ.ಸಿ.ಲಿಂಗರಾಜೇ ಗೌಡ ಅವರು ಮಾತನಾಡಿ, ಎಂ.ಫಿಲ್ ತೇರ್ಗಡೆಯಾದ ಹೆಚ್ಚಿನ ವಿದ್ಯಾರ್ಥಿಗಳು ಪಿಹೆಚ್.ಡಿ ಪ್ರವೇಶ ಪರೀಕ್ಷೆ ಅವಶ್ಯಕತೆಯಿರುವುದಿಲ್ಲ ಎಂಬ |

| | |
|---|---|
| | ಭಾವನೆಯಿಂದ ಪಿಹೆಚ್.ಡಿ ಪ್ರವೇಶ ಪರೀಕ್ಷೆಗೆ ಹಾಜರಾಗಿರುವುದಿಲ್ಲ. ಆದ ಕಾರಣ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವ (ಪರೀಕ್ಷಾಂಗ)ರವರು ಚರ್ಚಿಸಿ, ಗೈರುಹಾಜರಾಗಿರುವ ವಿದ್ಯಾರ್ಥಿಗಳಗೆ ಪ್ರತ್ಯೇಕ ಪಿಹೆಚ್.ಡಿ ಪ್ರವೇಶ ಪರೀಕ್ಷೆ ನಡೆಸಬೇಕೆಂದು ತಿಳಿಸಿದರು.<br>ಡಾ. ಎಂ.ಎಸ್.ದಾಮೋದರ್ ಮಾತನಾಡಿ, ಒಂದು ವೇಳೆ ಪಿಹೆಚ್.ಡಿ ಪ್ರವೇಶ ಪರೀಕ್ಷೆ ನಡೆಸುವುದಾದರೆ ಗೈರುಹಾಜರಾಗಿರುವವರನ್ನು ಮಾತ್ರ ಪರಿಗಣಿಸಿದೇ ಪ್ರತಿಯೊಬ್ಬರಿಗೂ ಪಿಹೆಚ್.ಡಿ ಪ್ರವೇಶ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ, ಗೈರುಹಾಜರಾಗಿರುವ ವಿದ್ಯಾರ್ಥಿಗಳು ಪ್ರಸ್ತುತ ನಡೆಸಿರುವ ಪಿಹೆಚ್.ಡಿ ಪ್ರವೇಶ ಪರೀಕ್ಷೆ ಬರೆಯಬೇಕಾಗಿತ್ತು. ಅದು ಅವರ ತಪ್ಪಾಗಿರುತ್ತದೆ. ಈ ವಿದ್ಯಾರ್ಥಿಗಳಗೋಸ್ಕರ ಅನುಕೂಲವಾಗುವಂತೆ ವಿಶ್ವವಿದ್ಯಾನಿಲಯವು policy ಮಾಡಬಾರದೆಂದು ತಿಳಿಸಿದರು. ಈ ಪ್ರಸ್ತಾವನೆಗೆ ಶ್ರೀ ಎಸ್.ಡಿ.ದೊಡ್ಡಚಾರಿ ಬೆಂಬಲಿಸಿದರು.<br>ಮಾನ್ಯ ಕುಲಪತಿಯವರು ಹಾಗೂ ಪ್ರೊ.ಡಿ.ಆನಂದ್ ಅವರುಗಳು ಮಾತನಾಡಿ, ಪ್ರಸ್ತುತ ನಡೆಸಿರುವ ಪಿಹೆಚ್.ಡಿ ಪ್ರವೇಶ ಪರೀಕ್ಷೆಗೆ ಕೋವಿಡ್-19 ಕಾರಣದಿಂದ ಬೇರೆ ಜಿಲ್ಲೆ/ತಾಲ್ಲೂಕು ಹಾಗೂ ಗ್ರಾಮಗಳಿಂದ ಬರುವ ವಿದ್ಯಾರ್ಥಿಗಳು ಗೈರುಹಾಜರಾಗಿ ಪರೀಕ್ಷೆಗಳನ್ನು ಬರೆಯಲಾಗಿರುವುದಿಲ್ಲ. ಈಗ ಶೇ.30-35 ವಿದ್ಯಾರ್ಥಿಗಳು ಮಾತ್ರ ಹಾಜರಾಗಿರುತ್ತಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಪ್ರವೇಶ ಪರೀಕ್ಷೆಯನ್ನು ನಡೆಸುವ ಅಧಿಸೂಚನೆ ಹೊರಡಿಸುವುದು ಸೂಕ್ತವೆಂದು ತಿಳಿಸಿದರು.<br>ಇದಕ್ಕೆ ಪ್ರತಿಕ್ರಿಯಿಸಿದ ಡಾ.ಎಂ.ಎಸ್.ದಾಮೋದರ್ ಹಾಗೂ ಶ್ರೀ ಎಸ್.ಡಿ.ದೊಡ್ಡಚಾರಿ ಅವರು ಪ್ರಸ್ತುತ ನಡೆಸಿರುವ ಪಿಹೆಚ್.ಡಿ ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಬೇಕು. ತದನಂತರ, ಪಿಹೆಚ್.ಡಿ ಪ್ರವೇಶ ಪರೀಕ್ಷೆಯನ್ನು ನಡೆಸುವ ಅಧಿಸೂಚನೆ ಹೊರಡಿಸುವುದು ಸೂಕ್ತವೆಂದು ತಿಳಿಸಿದರು. ಈ ಪ್ರಸ್ತಾವನೆಗೆ ಸಭೆಯು ಒಪ್ಪಿಗೆ ಸೂಚಿಸಿತು. |
| ತೀರ್ಮಾನ | ಪಿಹೆಚ್.ಡಿ. ನಿಯಮಾವಳಿ-2017ಕ್ಕೆ ಈ ಕೆಳಕಂಡ ಅಂಶಗಳನ್ನು ತಿದ್ದುಪಡಿ ಮಾಡಿರುವುದರೊಂದಿಗೆ ಅನುಮೋದಿಸಿತು.<br>1. The Candidates who have been passed M.Phil with entrance exam and course work from any UGC recognized University / Institutions are exempted from the Ph.D. entrance examination.<br>2. The recognized research centers are required to invite at least one representative from the University to conduct C3 of Paper-II/Course-II (Review of literature in the area of research) of the Ph.D. course work examination.<br>3. Candidate qualified with GPAT after P.G. Degree are exempted from Ph.D. entrance examination.<br>4. A Candidate has to qualify the Ph.D. course work examination obtaining minimum of 50% of marks for SC/ST/CAT-I student and minimum of 55% of marks for other category students are eligible for the permanent registration in their respective discipline/subjects. |
| ಸಾಮಾನ್ಯ ಸಭೆ 2020/12.15 | ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರಕ್ಕೆ ಸಂಬಂಧಿಸಿದ ಕರಡು ಪರಿನಿಯಮಾವಳಿಯನ್ನು ಮಾರ್ಪಡಿಸಿ ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ. |
| ೩೯ ಮೂಪ ನ | ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರಕ್ಕೆ ಸಂಬಂಧಿಸಿದ ಕರಡು ಪರಿನಿಯಮಾವಳಿಯನ್ನು ಆಕ್ಷೇಪಣೆಯೊಂದಿಗೆ ಸರ್ಕಾರವು ಹಿಂದಿರುಗಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಆರ್ಥಿಕ ನಿರ್ಬಂಧಗಳು ತೆರವುಗೊಂಡ ನಂತರ ಸೂಕ್ತ ಪ್ರಸ್ತಾವನೆಯೊಂದಿಗೆ ಅನುಮೋದನೆಗೆ ಸರ್ಕಾರಕ್ಕೆ ಸಲ್ಲಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2020/12.16 | ಮೈಸೂರು ವಿಶ್ವವಿದ್ಯಾನಿಲಯದ ಆನ್‌ಲೈನ್ ಪ್ರೋಗ್ರಾಂಗಳ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ 03 ಸ್ನಾತಕ ಪದವಿ ಹಾಗೂ 10 ಸ್ನಾತಕೋತ್ತರ ಪದವಿಗಳನ್ನು Online ಮುಖಾಂತರ 2019-20ರ ಶೈಕ್ಷಣಿಕ ವರ್ಷವೂ ಸೇರಿದಂತೆ ನಡೆಸಲಾಗುತ್ತಿದ್ದು, UGCಯು ಈಗಾಗಲೇ ನಿರ್ದೇಶಿಸಿದಂತೆ 2020-21 ಹಾಗೂ ನಂತರದ ವರ್ಷಗಳಲ್ಲೂ ನಡೆಸುವುದರಿಂದ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ UGC-Portalನಲ್ಲಿ ಪ್ರದರ್ಶಿಸಲು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆ ಅಗತ್ಯವಿರುತ್ತದೆ. ಇದು NAAC ನಿಂದ ಮಾನ್ಯತೆ ಹೊಂದಲು ಸಹ ವಿಶ್ವವಿದ್ಯಾನಿಲಯಕ್ಕೆ ಅತ್ಯಗತ್ಯವಾಗಿರುವುದರಿಂದ ಇದನ್ನು ಅನುಮೋದಿಸಬೇಕೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.<br>ಆನ್‌ಲೈನ್ ಪ್ರೋಗ್ರಾಂಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಿಂಡಿಕೇಟ್ 13 ಕೋರ್ಸ್‌ಗಳನ್ನು ಆನ್‌ಲೈನ್ ಮೂಲಕ ನಡೆಸಬಹುದಾಗಿದೆಯೆಂದು ಅಭಿಪ್ರಾಯಿಸಿತು. |
| **DECISION** | After lengthy discussion, the Syndicate unanimously approved to run the following courses through online mode in the University.<br>1. Bachelor of Business Administration (BBA)<br>2. Bachelor of Commerce (B.Com)<br>3. Bachelor of Computer Application (BCA)<br>4. Master of Commerce (M.Com)<br>5. Master of Computer Applications (MCA) - 2 years<br>6. Master of Science (Information Technology)<br>7. Master of Business Administration(MBA)<br>8. Master of Business Administration (Dual Specialization)<br>9. Master of Business Administration (Finance)<br>10. Master of Business Administration (Human Resource Management)<br>11. Master of Business Administration (Marketing Management)<br>12. Master of Business Administration (Operation Management)<br>13. Master of Business Administration (Supply Chain Management) |
| ಸಾಮಾನ್ಯ ಸಭೆ 2020/12.17 | Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ಮುಂದುವರೆಸುವ ಬಗ್ಗೆ. |
| | ಶ್ರೀ ಎಂ.ಬಿ.ಗಪ್ಪಣ್ಣ ಮಾತನಾಡಿ, Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರುಗಳು ಒಂದೂವರೆ ವರ್ಷದಿಂದ ವೇತನ ಪಾವತಿಸಿರುವುದಿಲ್ಲ ಎಂದು ತಿಳಿಸಿದ್ದು, ಈ ಸಂಬಂಧ ವೇತನ ಪಾವತಿಸಲು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.<br>ಶ್ರೀ ಎಸ್.ಡಿ.ದೊಡ್ಡಚಾರಿ ಮಾತನಾಡಿ, ಯುಜಿಸಿ 11ನೇ ಯೋಜನೆಯಡಿಯಲ್ಲಿ ಸ್ಥಾಪನೆಯಾಗಿರುವ ಸದರಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರ ನೇಮಕಾತಿಯು "on temporary & contractual basis" ಎಂದು ಹಾಗೂ 11ನೇ ಯೋಜನೆಯ ಅವಧಿಯ ಅಂತ್ಯದವರೆಗೆ ಎಂದು ಸ್ಪಷ್ಟವಾಗಿ ನೇಮಕಾತಿ ಆದೇಶದಲ್ಲಿ ನಮೂದಿಸಲಾಗಿದೆಯೆಂದು ತಿಳಿಸಿದರು.<br>ಹಣಕಾಸು ಅಧಿಕಾರಿಗಳು ಮಾತನಾಡಿ, ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರುಗಳ ವೇತನಕ್ಕಾಗಿ ವಿಶ್ವವಿದ್ಯಾನಿಲಯವು 68.00 ಲಕ್ಷ ರೂ.ಗಳನ್ನು ಇತರೆ |

| | |
|---|---|
| | ಶೀರ್ಷಿಕೆಯಿಂದ ನೀಡಲಾಗಿರುತ್ತದೆ. 03 ತಿಂಗಳಲ್ಲಿ ಯುಜಿಸಿಯಿಂದ ಅನುದಾನ ಬಿಡುಗಡೆ ಮಾಡಿಸಿ, ವಿಶ್ವವಿದ್ಯಾನಿಲಯಕ್ಕೆ ಜಮಾ ಮಾಡಲಾಗುವುದೆಂದು ಆ ಸಂದರ್ಭದಲ್ಲಿ ತಿಳಿಸಿದ ಬೋಧಕರುಗಳು 08 ತಿಂಗಳಾದರೂ ಅನುದಾನ ಬಿಡುಗಡೆ ಮಾಡಿಸಿ ವಿಶ್ವವಿದ್ಯಾನಿಲಯಕ್ಕೆ ಜಮಾ ಮಾಡುವ ಸಂಬಂಧ ಇದುವರೆವಿಗೂ ಕ್ರಮ ವಹಿಸಿರುವುದಿಲ್ಲ ಎಂದು ತಿಳಿಸಿದರು.<br>ಈ ಸಂಬಂಧ ಮಾತನಾಡಿದ ಕುಲಪತಿಗಳು, ಯುಜಿಸಿಯಿಂದ ಅನುದಾನ ಬಿಡುಗಡೆಯಾಗದ ಕಾರಣದಿಂದ ಸುಮಾರು ತಿಂಗಳು ವೇತನ ಪಾವತಿಸಿರುವುದಿಲ್ಲ. ಬೋಧಕರುಗಳ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯದ ಇತರೆ ಶೀರ್ಷಿಕೆಯಿಂದ ಇವರುಗಳಿಗೆ 68.00 ಲಕ್ಷ ರೂ.ಗಳನ್ನು ಇದುವರೆವಿಗೂ ವೇತನಕ್ಕಾಗಿ ಪಾವತಿಸಲಾಗಿದೆ. ಸದರಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರು ಯುಜಿಸಿಯಿಂದ ಅನುದಾನ ಬಿಡುಗಡೆಗೊಳಿಸಲು ವೈಯಕ್ತಿಕವಾಗಲೀ ಅಥವಾ ಪತ್ರ ಮುಖೇನ ಆಗಾಗ ಕ್ರಮ ವಹಿಸುತ್ತಿರಬೇಕು. ಏಕೆಂದರೆ ವಿಶ್ವವಿದ್ಯಾನಿಲಯದ ಇತರೆ ಶೀರ್ಷಿಕೆಯಿಂದ ಮಾನವೀಯತೆ ಆಧಾರದ ಮೇಲೆ ವೇತನ ಪಾವತಿಸಲಾಗಿರುತ್ತದೆ. ಆದ್ದರಿಂದ ಅನುದಾನವನ್ನು ಆ ಶೀರ್ಷಿಕೆಗೆ ಮರು ಜಮಾ ಮಾಡಬೇಕು. ಇಲ್ಲವಾದಲ್ಲಿ ವಿಶ್ವವಿದ್ಯಾನಿಲಯದ ಈ ಕ್ರಮವು ಆಡಿಟ್ ಆಕ್ಷೇಪಣೆಗೊಳಪಡುತ್ತದೆ. ಆದರೆ ಯುಜಿಸಿಯು ದಿನಾಂಕ: 27-10-2020ರಲ್ಲಿ ಹೊರಡಿಸಿರುವ ಆದೇಶದಲ್ಲಿ CSSEIP ಕೇಂದ್ರವನ್ನು ದಿ.31-03-2021 ರವರೆಗೆ ಮುಂದುವರೆಸಲಾಗಿದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯದಿಂದ ಯಾವುದೇ ರೀತಿಯ ಆರ್ಥಿಕ ಹೊರೆಯಿಲ್ಲದಂತೆ ಸದರಿ ಕೇಂದ್ರದ ಸಿಬ್ಬಂದಿಗಳ ಸೇವೆಯನ್ನು ದಿನಾಂಕ: 31-03-2021ರವರೆಗೆ ಮುಂದುವರೆಸಬಹುದೆಂದು ತಿಳಿಸಿದರು. |
| ತೀರ್ಮಾನ | ಯುಜಿಸಿಯು ದಿನಾಂಕ: 27-10-2020ರಲ್ಲಿ ಹೊರಡಿಸಿರುವ ಆದೇಶದಲ್ಲಿ CSSEIP ಕೇಂದ್ರವನ್ನು ದಿ.31-03-2021 ರವರೆಗೆ ಮುಂದುವರೆಸಿರುವುದರಿಂದ, Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಬೋಧಕರುಗಳ ಸೇವೆಯನ್ನು ದಿನಾಂಕ: 31-03-2021ರವರೆಗೆ ವಿಶ್ವವಿದ್ಯಾನಿಲಯದಿಂದ ಯಾವುದೇ ರೀತಿಯ ಆರ್ಥಿಕ ಹೊರೆಯಿಲ್ಲದಂತೆ ಮುಂದುವರೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2020/12.18 | ಪಿಹೆಚ್.ಡಿ ನಿಯಮಾವಳಿ 2017ಕ್ಕೆ ಮಾರ್ಪಾಡು ಮಾಡಿರುವ ಸಂಬಂಧ ವಿನಿಯಮಾವಳಿಯನ್ನು ಅನುಮೋದಿಸುವ ಕುರಿತು. |
| ತೀರ್ಮಾನ | ಪಿಹೆಚ್.ಡಿ ನಿಯಮಾವಳಿ 2017ಕ್ಕೆ ಮಾರ್ಪಾಡು ಮಾಡಿರುವ ಕರಡು ವಿನಿಯಮಾವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2020/12.19 | ಯುವರಾಜ ಕಾಲೇಜಿನ ಕ್ಯಾಂಟೀನ್ ಗುತ್ತಿಗೆಯ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಯುವರಾಜ ಕಾಲೇಜಿನ ಕ್ಯಾಂಟೀನ್ ನಡೆಸುತ್ತಿರುವ ಗುತ್ತಿಗೆದಾರರು ಜುಲೈ 2018 ರಿಂದ ನವೆಂಬರ್ 2019ರವರೆಗೆ ಲೈಸೆನ್ಸ್ ಶುಲ್ಕವನ್ನು ಪಾವತಿಸದೇ ಕಾಲೇಜಿಗೆ ಆರ್ಥಿಕ ನಷ್ಟವನ್ನುಂಟು ಮಾಡಿರುತ್ತಾರೆ. ಈ ಸಂಬಂಧ ಕಾಲೇಜಿನಿಂದ ಗುತ್ತಿಗೆದಾರರಿಗೆ ಆರು ನೋಟೀಸ್‌ಗಳನ್ನು ಜಾರಿಗೊಳಿಸಿದ್ದರೂ, ಉತ್ತರವು ನೀಡದೇ ಹಾಗೂ ಲೈಸೆನ್ಸ್ ಶುಲ್ಕವನ್ನು ಪಾವತಿಸದೇ ಕ್ಯಾಂಟೀನ್ ಮುಚ್ಚಲ್ಪಟ್ಟಿರುತ್ತದೆ. ಆದ್ದರಿಂದ, ಕಾನೂನು ರೀತಿಯಲ್ಲಿ ಕೋರ್ಟ್ ಆದೇಶದೊಂದಿಗೆ ಕ್ಯಾಂಟೀನ್ ಗುತ್ತಿಗೆಯನ್ನು ತೆರವುಗೊಳಿಸಿ, ಕ್ಯಾಂಟೀನ್ ಕಟ್ಟಡವನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಂಡು ಅರ್ಹ ಗುತ್ತಿಗೆದಾರರಿಗೆ ನೀಡುವ ಅಧಿಕಾರವನ್ನು ಯುವರಾಜ ಕಾಲೇಜಿನ ಪ್ರಾಂಶುಪಾಲರಿಗೆ ವಹಿಸಲಾಗಿರುತ್ತದೆಂದು ಸಭೆಯಲ್ಲಿ ತಿಳಿಸಿದರು. ಡಾ. ಈ.ಸಿ.ನಿಂಗರಾಜ್ ಗೌಡ ಹಾಗೂ ಶ್ರೀ ಎಸ್.ಡಿ.ದೊಡ್ಡಚಾರಿ ಮಾತನಾಡಿ, ಕೋರ್ಟ್ |

| | |
|---|---|
| | ದಾವೆ ಹೂಡಿದರೆ ಕ್ಯಾಂಟೀನ್ ನಡೆಸುತ್ತಿರುವ ಗುತ್ತಿಗೆದಾರರನ್ನು ತೆರವುಗೊಳಿಸುವುದು ತಡವಾಗುತ್ತದೆಂದು ತಿಳಿಸಿದರು. ಇದಕ್ಕೆ ಮಾನ್ಯ ಕುಲಪತಿಯವರು ಮಾತನಾಡಿ, ಪೋಲೀಸ್ ಮುಖಾಂತರ ವಿಡಿಯೋದೊಂದಿಗೆ ತೆರವುಗೊಳಿಸಲಾಗುವುದೆಂದು ತಿಳಿಸಿದರು.<br>ಶ್ರೀ ಎಸ್.ಡಿ.ದೊಡ್ಡಚಾರಿ ಮಾತನಾಡಿ, ಪ್ರಸ್ತುತವಿರುವ ಕ್ಯಾಂಟೀನ್ ಗುತ್ತಿಗೆಯನ್ನು ವಹಿಸಿಕೊಂಡಿರುವ ಗುತ್ತಿಗೆದಾರರು ಬಾಕಿ ಇರುವ ಲೈಸೆನ್ಸ್ ಶುಲ್ಕವನ್ನು ಪಾವತಿಸಿದರೆ, ಅವರಿಗೆ ಕ್ಯಾಂಟೀನ್ ಗುತ್ತಿಗೆಯನ್ನು ಮುಂದುವರೆಸಲು ಅವಕಾಶ ಮಾಡಿಕೊಡಬಹುದೆಂದು ಸಲಹೆ ನೀಡಿದರು. ಇದಕ್ಕೆ ಶ್ರೀಮತಿ ಪವಿತ್ರ.ವೈ.ಕೆ ಅವರು ಮಾತನಾಡಿ, ವಿಶ್ವವಿದ್ಯಾನಿಲಯವು ನಿಗಧಿಗೊಳಿಸಿರುವ ಗುತ್ತಿಗೆಯ ಅವಧಿಯು ಪೂರ್ಣಗೊಂಡಿದ್ದರೆ, ಪರಿಷ್ಕೃತ ಟೆಂಡರ್ ಆಹ್ವಾನಿಸುವುದು ಸೂಕ್ತವೆಂದು ಅಭಿಪ್ರಾಯಿಸಿದರು.<br>ಡಾ.ಎಂ.ಎಸ್.ದಾಮೋದರ್ ಮಾತನಾಡಿ, ಪ್ರಾಂಶುಪಾಲರು, ಯುವರಾಜ ಕಾಲೇಜು ಇವರ ಮುಖಾಂತರ ಟೆಂಡರ್ ಆಹ್ವಾನಿಸುವ ಬದಲು ಮೈಸೂರು ವಿಶ್ವವಿದ್ಯಾನಿಲಯವೇ ಈ ಉಸ್ತುವಾರಿಯನ್ನು ವಹಿಸಿಕೊಳ್ಳುವುದು ಸೂಕ್ತವೆಂದು ಹಾಗೂ ಯುವರಾಜ ಕಾಲೇಜಿನ ಪ್ರಾಂಶುಪಾಲರಿಗೆ ಶೈಕ್ಷಣಿಕಕ್ಕೆ ಸಂಬಂಧಿಸಿದ ಉಸ್ತುವಾರಿಯನ್ನು ವಹಿಸಿ, ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ಜವಾಬ್ದಾರಿಗಳನ್ನು ಮೈಸೂರು ವಿಶ್ವವಿದ್ಯಾನಿಲಯ ಅಧೀನದಲ್ಲಿಟ್ಟುಕೊಳ್ಳಬೇಕೆಂದು ತಿಳಿಸಿದರು. ಈ ಪ್ರಸ್ತಾವನೆಗೆ ಮಾನ್ಯ ಕುಲಪತಿಯವರು ಹಾಗೂ ಕುಲಸಚಿವರು ಮಾತನಾಡಿ, ಯುವರಾಜ ಕಾಲೇಜು ಸ್ವಾಯತ್ತ ಕಾಲೇಜಾಗಿರುತ್ತದೆ. ಮತ್ತೆ ಹಿಂದಿನಂತೆಯೇ Centralized ಮಾಡುವುದು ಸೂಕ್ತವಲ್ಲ. ನಿಮ್ಮ ಪರಿಕಲ್ಪನೆಯನ್ನು ಮುಂದಿನ ದಿನಗಳಲ್ಲಿ ಕಾರ್ಯಗತಗೊಳಿಸಬೇಕಾದರೆ ಯುವರಾಜ ಕಾಲೇಜಿಗೆ ಪುನರ್ ಸ್ವಾಯತ್ತತೆ ನೀಡುವ ಸಂದರ್ಭಕ್ಕೂ ಮುಂಚೆ ಒಂದು ಸಮಿತಿಯನ್ನು ರಚಿಸಿ, ಕಾಲೇಜಿನಲ್ಲಿ ವ್ಯವಹರಿಸಲ್ಪಡುತ್ತಿರುವ ಶೈಕ್ಷಣಿಕ ಹಾಗೂ ಆರ್ಥಿಕತೆಯ ಬಗ್ಗೆ ಸಮಿತಿಯು ಸಾಧಕ-ಬಾಧಕ ವರದಿಯನ್ನು ಸಲ್ಲಿಸಿದ ನಂತರ ಮುಂದಿನ ಕ್ರಮ ವಹಿಸಲಾಗುವುದೆಂದು ತಿಳಿಸಿದರು.<br>ಶ್ರೀ ಎಸ್.ಡಿ.ದೊಡ್ಡಚಾರಿ ಮತ್ತು ಡಾ.ಎಂ.ಎಸ್.ದಾಮೋದರ್ ಮಾತನಾಡಿ, ಯುವರಾಜ ಕಾಲೇಜಿನ ಆಡಳಿಯ ಮಂಡಳಿಯು ನಿಯಮಾನುಸಾರ 03 ಸಿಂಡಿಕೇಟ್ ಸದಸ್ಯರನ್ನು ಒಳಗೊಂಡಿರುತ್ತದೆ. ಆದರೆ, ಪ್ರಸ್ತುತವಿರುವ ಆಡಳಿತ ಮಂಡಳಿಯಲ್ಲಿ ಯಾರೂ ಸಿಂಡಿಕೇಟ್ ಸದಸ್ಯರುಗಳು ಇಲ್ಲದಿರುವುದು ಕಂಡು ಬಂದಿರುತ್ತದೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಯುಜಿಸಿಯಿಂದ ನಾಮನಿರ್ದೇಶನವಾಗಿದ್ದ ಸದಸ್ಯರೊಬ್ಬರು ನಿವೃತ್ತರಾಗಿರುತ್ತಾರೆ. ಈ ಸಂಬಂಧ ಒಬ್ಬರು ಸದಸ್ಯರನ್ನು ನಾಮನಿರ್ದೇಶನ ಮಾಡಬೇಕೆಂದು ಕೋರಿ ಯುಜಿಸಿಗೆ ಪತ್ರಗಳನ್ನು ಬರೆಯಲಾಗಿರುತ್ತದೆ. ಯುಜಿಸಿಯಿಂದ ಒಬ್ಬರು ಸದಸ್ಯರನ್ನು ನಾಮನಿರ್ದೇಶನ ಮಾಡಿದ ಕೂಡಲೇ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಪರಿಷ್ಕೃತ ಆಡಳಿತ ಮಂಡಳಿಯನ್ನು ರಚಿಸಲಾಗುವುದೆಂದು ತಿಳಿಸಿದರು. |
| ತೀರ್ಮಾನ | ಯುವರಾಜ ಕಾಲೇಜಿನ ಕ್ಯಾಂಟೀನ್ ಗುತ್ತಿಗೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು ಯುವರಾಜ ಕಾಲೇಜು ಸ್ವಾಯತ್ತತ ಸಂಸ್ಥೆಯಾಗಿರುವುದರಿಂದ ಸದರಿ ಕಾಲೇಜಿನ ಕ್ಯಾಂಟೀನ್ ಗುತ್ತಿಗೆಯನ್ನು ಕಾಲೇಜಿನ ವತಿಯಿಂದಲೇ ವ್ಯವಹರಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತವಿರುವ ಕ್ಯಾಂಟೀನ್ ಗುತ್ತಿಗೆದಾರರನ್ನು ತೆರವುಗೊಳಿಸಿ, ಕ್ಯಾಂಟೀನ್‌ನ ಪರಿಷ್ಕೃತ ಗುತ್ತಿಗೆಯನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಮುಖಾಂತರ ಕೈಗೊಳ್ಳಲು ಯುವರಾಜ ಕಾಲೇಜಿನ ಪ್ರಾಂಶುಪಾಲರಿಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2020/12.20 | ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಸಂಸ್ಥೆಯೊಡನೆ ಮಾಡಿಕೊಂಡಿರುವ MOU ನಲ್ಲಿ ಕೆಲವು ಅಂಶಗಳನ್ನು ಸೇರ್ಪಡೆಗೊಳಿಸಲು ಅನುಮೋದನೆ ಕೋರಿರುವ ಬಗ್ಗೆ. |

| | |
|---|---|
| | ಮಾನ್ಯ ಕುಲಪತಿಯವರು ಮಾತನಾಡಿ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಸಂಸ್ಥೆಯು ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ಪಡೆದಿರುವ ಸಂಸ್ಥೆಯಾಗಿದ್ದು, ಇದರಂತೆ ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ಪಡೆದಿರುವ ISEC ಸಂಸ್ಥೆಗೆ ಅವರ ಕೋರಿಕೆಯಂತೆ 2017ರಲ್ಲಿ ನವೀಕರಿಸಿದ MOU ಅನ್ನು 2012 ರಲ್ಲಿದ್ದ ಕೆಲವು ಅಂಶಗಳನ್ನು ಮಾರ್ಪಾಡು ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಲಾಗಿದೆ. ಅದರಂತೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಸಂಸ್ಥೆಯೊಡನೆ ಮಾಡಿಕೊಂಡಿರುವ MOU ನಲ್ಲಿ Terms and Conditions ನ 3.7(ಎ) ಯಲ್ಲಿ ಕೆಲವು ಅಂಶಗಳನ್ನು ಸೇರ್ಪಡೆಗೊಳಿಸಲು ಅನುಮತಿ ನೀಡಬೇಕೆಂದು ಮನವಿ ಸಲ್ಲಿಸಿರುತ್ತದೆ. ಇವರ ಮನವಿಗೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಸಂಸ್ಥೆಯ ಮನವಿಯನ್ನು ಸಿಂಡಿಕೇಟ್ ಸಭೆಯು ಪುರಸ್ಕರಿಸಿತು. |
| **ತೀರ್ಮಾನ** | ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಸಂಸ್ಥೆಯೊಡನೆ ಮಾಡಿಕೊಂಡಿರುವ MOU ನಲ್ಲಿ Terms and Conditions ನ 3.7(ಎ) ಯಲ್ಲಿ ಕೆಳಕಂಡ ಅಂಶಗಳನ್ನು ಸೇರ್ಪಡೆಗೊಳಿಸಲು ಸಭೆಯು ಅನುಮೋದಿಸಿತು.<br>**<u>Terms and Conditions ನ 3.7 (a)</u>**<br>The Institution will conduct admission test/s and the Ph.D course work of the University of Mysore in concerned subjects according to the Ph.D calendar of events of University of Mysore as per Ph.D regulations clauses 5.1 to 5.9 all inclusive and the candidates taking entrance test/Ph.D course work conducted by the institute (AIISH) are not exempted. The students will have to pay the fees as prescribed by the University of Mysore. |
| ಸಾಮಾನ್ಯ ಸಭೆ 2020/12.21 | ಶ್ರೀ ದೇವರಾಜು ಅರಸು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| **ತೀರ್ಮಾನ** | ಶ್ರೀ ದೇವರಾಜು ಅರಸು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2020/12.22 | ಶ್ರೀಮತಿ ವನಜಾಕ್ಷಿ ಎನ್.ಎಂ, ಸಂಶೋಧನಾ ವಿದ್ಯಾರ್ಥಿನಿ, ವಿದ್ಯುನ್ಮಾನ ವಿಭಾಗ ಇವರಿಗೆ ಸಂಶೋಧನಾ ಅವಧಿಯನ್ನು ವಿಸ್ತರಣೆ ನೀಡುವ ಬಗ್ಗೆ. |
| | ಶ್ರೀಮತಿ ವನಜಾಕ್ಷಿ ಎನ್.ಎಂ, ಸಂಶೋಧನಾ ವಿದ್ಯಾರ್ಥಿನಿ, ವಿದ್ಯುನ್ಮಾನ ವಿಭಾಗ ಇವರ ಸಂಶೋಧನಾ ಅವಧಿಯು ದಿನಾಂಕ 21-01-2020ಕ್ಕೆ 07 ವರ್ಷಗಳು ಪೂರ್ಣಗೊಂಡಿರುತ್ತದೆ ಮತ್ತು ದಿ.21-01-2021ಕ್ಕೆ 08 ವರ್ಷಗಳಾಗುತ್ತದೆ. ಈ ಅಭ್ಯರ್ಥಿಯು ವೈಯಕ್ತಿಕ ಸಮಸ್ಯೆಗಳಿಂದ ಹಾಗೂ ಕೋವಿಡ್-19 ಕಾರಣದಿಂದಾಗಿ ನಿಗಧಿತ ಅವಧಿಯಲ್ಲಿ ಮಹಾಪ್ರಬಂಧವನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ. ಆದುದರಿಂದ, ಹೆಚ್ಚುವರಿಯಾಗಿ ಮತ್ತೆ ಒಂದು ವರ್ಷ ಕಾಲಾವಕಾಶವನ್ನು ನೀಡಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಕೋವಿಡ್-19 ಇರುವುದರಿಂದ ಸಭೆಯು ಸದರಿಯವರ ಮನವಿಯನ್ನು ಸಮ್ಮತಿಸಿದ್ದಲ್ಲಿ ರೂ.50,000/- ದಂಡಶುಲ್ಕದೊಂದಿಗೆ ಒಂದು ವರ್ಷ ಕಾಲಾವಕಾಶವನ್ನು ವಿಸ್ತರಿಸಲು ಅನುಮತಿ ನೀಡಲಾಗುವುದೆಂದು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು.<br>ಡಾ. ಈ.ಸಿ.ಲಿಂಗರಾಜೇ ಗೌಡ, ಶ್ರೀ ಎಸ್.ಡಿ.ದೊಡ್ಡಬಾರಿ ಮತ್ತು ಡಾ.ಎಂ.ಎಸ್.ದಾಮೋದರ ಅವರುಗಳು ಮಾತನಾಡಿ, ಹಿಂದೆ ಸಿಂಡಿಕೇಟ್ ಸಭೆಯಲ್ಲಿ |

| | |
|---|---|
| | ಸಂಶೋಧನಾ ಅವಧಿಯು 07 ಪೂರ್ಣಗೊಂಡಿದ್ದರೆ, ದಂಡಶುಲ್ಕದೊಂದಿಗೆ ಆರು ತಿಂಗಳ ಕಾಲಾವಕಾಶ ವಿಸ್ತರಿಸಲಾಗುತ್ತಿತ್ತು. ತದನಂತರ, ಯಾವುದೇ ಕಾರಣಕ್ಕೂ ಕಾಲಾವಕಾಶ ವಿಸ್ತರಿಸಬಾರದೆಂದು ತೀರ್ಮಾನವನ್ನು ಕೈಗೊಂಡಂತೆ ಸದರಿ ಸಂಶೋಧನಾ ವಿದ್ಯಾರ್ಥಿಗೂ ಕಾಲಾವಕಾಶ ವಿಸ್ತರಿಸದಿರುವುದು ಹಾಗೂ ಕೋವಿಡ್-19 ಪ್ರಾರಂಭವಾಗುವ ಮೊದಲೇ ಸದರಿ ಸಂಶೋಧನಾ ವಿದ್ಯಾರ್ಥಿಯ ಸಂಶೋಧನಾ ಅವಧಿಯು 07 ವರ್ಷಗಳು ಪೂರ್ಣಗೊಂಡಿದ್ದು, ಇನ್ನು ಸ್ವಲ್ಪ ದಿನಗಳಲ್ಲಿ 08 ವರ್ಷವೂ ಪೂರ್ಣಗೊಳ್ಳುತ್ತಿರುವುದರಿಂದ ಸಂಶೋಧನಾ ಅವಧಿಯನ್ನು ವಿಸ್ತರಿಸಬಾರದೆಂದು ತಿಳಿಸಿದರು. ಈ ಪ್ರಸ್ತಾವನೆಗೆ ಇತರೆ ಸಿಂಡಿಕೇಟ್ ಸದಸ್ಯರುಗಳು ಬೆಂಬಲ ಸೂಚಿಸಿದರು.<br><br>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಸಂಶೋಧನಾ ಅವಧಿಯನ್ನು ಇದುವರೆವಿಗೂ ಗರಿಷ್ಠ 07 ವರ್ಷ ಆರು ತಿಂಗಳು ಮಾತ್ರ ವಿಸ್ತರಿಸಲಾಗಿದೆ. ಒಂದು ವೇಳೆ ಸದರಿ ಸಂಶೋಧನಾ ವಿದ್ಯಾರ್ಥಿಯ ಸಂಶೋಧನಾ ಅವಧಿಯನ್ನು ವಿಸ್ತರಿಸಿದರೆ, ಈ ಅಂಶವನ್ನು ಉದಾಹರಣೆಗೆ ತೆಗೆದುಕೊಂಡು ಮುಂದೆ ತಡವಾಗಿ ಮಹಾಪ್ರಬಂಧ ಸಲ್ಲಿಸಲು ಕಾಲಾವಕಾಶ ಕೋರುವ ಎಲ್ಲಾ ಮನವಿಗಳನ್ನು ಪರಿಗಣಿಸಬೇಕಾಗುತ್ತದೆ. ಆದ್ದರಿಂದ, ಸದರಿ ಸಂಶೋಧನಾ ಮನವಿಯನ್ನು ಯಾವುದೇ ಕಾರಣಕ್ಕೂ ಸಭೆಯು ಪರಿಗಣನೆಗೆ ತೆಗೆದುಕೊಳ್ಳದಿರುವುದು ಸೂಕ್ತವೆಂದು ತಿಳಿಸಿದರು. ಇದಕ್ಕೆ ಡಾ.ಚೈತ್ರ ನಾರಾಯಣ ಅವರು ಬೆಂಬಲ ಸೂಚಿಸಿದರು. |
| ತೀರ್ಮಾನ | ಶ್ರೀಮತಿ ವನಜಾಕ್ಷಿ ಎನ್.ಎಂ, ಸಂಶೋಧನಾ ವಿದ್ಯಾರ್ಥಿನಿ, ವಿದ್ಯುನ್ಮಾನ ವಿಭಾಗ ಇವರಿಗೆ ಸಂಶೋಧನಾ ಅವಧಿಯನ್ನು ವಿಸ್ತರಿಸುವ ಸಂಬಂಧ ಕೂಲಂಕಷವಾಗಿ ಚರ್ಚಿಸಿದ ಸಭೆಯು ಯಾವುದೇ ಕಾರಣಕ್ಕೂ ಸದರಿ ಸಂಶೋಧನಾ ವಿದ್ಯಾರ್ಥಿಯ ಮನವಿಯನ್ನು ಪುರಸ್ಕರಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2020/12.23 | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು. |
| | ಮಾನ್ಯ ಕುಲಪತಿಯವರು ಮಾತನಾಡಿ, ಸೆಪ್ಟೆಂಬರ್/ಅಕ್ಟೋಬರ್ 2020ರಲ್ಲಿ ನಡೆದ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಅಕ್ರಮದ ಆರೋಪಕ್ಕೆ ಒಳಗಾದ 30 ಪ್ರಕರಣಗಳು ವಿಶ್ವವಿದ್ಯಾನಿಲಯಕ್ಕೆ ವರದಿಯಾಗಿದ್ದು, 30 ಪ್ರಕರಣಗಳ ವಿಚಾರಣೆ ನಡೆಸಿದ ಎಂ.ಪಿ.ಎಲ್.ಇ ಸಮಿತಿಯು ಸಲ್ಲಿಸಿರುವ ಶಿಫಾರಸ್ಸುಗಳನ್ನು ಮುಂದಿನ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ಮಂಡಿಸಲಾಗಿದೆಯೆಂದು ತಿಳಿಸಿದರು.<br><br>ಶ್ರೀ ಎಸ್.ಡಿ.ದೊಡ್ಡಚಾರಿ ಮಾತನಾಡಿ, ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಪರೀಕ್ಷಾ ಅಕ್ರಮದ ಆರೋಪಕ್ಕೆ ಒಳಗಾದ ಕಾಲೇಜಿನಲ್ಲಿಯೇ ಮತ್ತೆ ಲೋಪದೋಷಗಳು ಪುನರಾವರ್ತನೆಯಾದಲ್ಲಿ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವ (ಪರೀಕ್ಷಾಂಗ)ರವರು ಪರೀಕ್ಷಾ ಅಕ್ರಮದ ಆರೋಪಕ್ಕೆ ಒಳಗಾದ ಕಾಲೇಜಿನಲ್ಲಿಯೇ ಮತ್ತೆ ಲೋಪದೋಷಗಳು ಪುನರಾವರ್ತನೆಯಾದ ಕಾಲೇಜುಗಳನ್ನು ಗಂಭೀರವಾಗಿ ಪರಿಗಣಿಸಿ, ಜಾಗೃತದಳದವರು ಹೆಚ್ಚಾಗಿ ಇಂತಹ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವುದರಿಂದ ಪ್ರಕರಣಗಳ ಸಂಖ್ಯೆಯು ಕಡಿಮೆ ಮಾಡಬಹುದಾಗಿದೆ ಎಂದು ಅಭಿಪ್ರಾಯಿಸಿದರು. |
| ತೀರ್ಮಾನ | ಸೆಪ್ಟೆಂಬರ್/ಅಕ್ಟೋಬರ್ 2020ರಲ್ಲಿ ನಡೆದ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಅಕ್ರಮದ ಆರೋಪಕ್ಕೆ ಒಳಗಾದ 30 ಪ್ರಕರಣಗಳಲ್ಲಿ ವಿದ್ಯಾರ್ಥಿಗಳ ವಿಚಾರಣೆ ನಡೆಸಿ ಹಾಗೂ ವಿಚಾರಣೆಗೆ ಗೈರುಹಾಜರಾದ ವಿದ್ಯಾರ್ಥಿಗಳ ಪ್ರಕರಣಗಳಿಗೆ ಏಕಪಕ್ಷೀಯ ನಿರ್ಣಯವನ್ನು ತೆಗೆದುಕೊಂಡು ಸಲ್ಲಿಸಿರುವ ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ (ಎಂ.ಪಿ.ಎಲ್.ಇ ) ಸಮಿತಿಯ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2020/12.24 | ರೂ.30.00 ಲಕ್ಷ ಮಿತಿಗೊಳಪಟ್ಟು ಸರ್ಕಾರಿ ತೋಟಗಾರಿಕಾ ಇಲಾಖೆಯ ಅಂಗಸಂಸ್ಥೆ ದಿ ನರ್ಸರಿಮೆನ್ ಕೋ ಆಪರೇಟಿವ್ ಸೊಸೈಟಿಯಿಂದ, ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗಕ್ಕೆ ಸೇವೆಗಳನ್ನು ಪಡೆಯುವ ಬಗ್ಗೆ. |

| | |
|---|---|
| ತೀರ್ಮಾನ | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ - 1999ರ ಕಾಲಂ 4(ಜಿ)ರನ್ವಯ ಸರ್ಕಾರದ ಅಧಿಸೂಚನೆಯನ್ನು ಅಳವಡಿಸಿಕೊಂಡು ರೂ.30.00 ಲಕ್ಷ ಮಿತಿಗೊಳಪಟ್ಟು ಸರ್ಕಾರಿ ತೋಟಗಾರಿಕಾ ಇಲಾಖೆಯ ಅಂಗಸಂಸ್ಥೆ ದಿ ನರ್ಸರಿಮೆನ್ ಕೋ ಆಪರೇಟಿವ್ ಸೊಸೈಟಿಯಿಂದ ಒಂದು ವರ್ಷದ ಅವಧಿಗೆ ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗಕ್ಕೆ ಸೇವೆಗಳನ್ನು ಪಡೆಯಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2020/12.25 | ಶ್ರೀ ಗುಬ್ಬಿ ವೀರಣ್ಣ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | ಶ್ರೀ ಗುಬ್ಬಿ ವೀರಣ್ಣ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನಿಯಮಾನುಸಾರ ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2020/12.26 | 2021-22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಯೋಜನೆಯಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಇಂಜಿನಿಯರಿಂಗ್ ಘಟಕ ಕಾಲೇಜನ್ನು ಪ್ರಾರಂಭಿಸುವ ಬಗೆಗೆ. |
| ತೀರ್ಮಾನ | 2021-22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಯೋಜನೆಯಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಇಂಜಿನಿಯರಿಂಗ್ ಘಟಕ ಕಾಲೇಜನ್ನು ಪ್ರಾರಂಭಿಸುವ ಸಂಬಂಧ AICTE, New Delhi ಮತ್ತು ಕರ್ನಾಟಕ ರಾಜ್ಯ ಸರ್ಕಾರದ ಅನುಮೋದನೆ ಪಡೆಯಲು ತಾತ್ಕಾಲಿಕ ನುರಿತ ಪ್ರಾಂಶುಪಾಲರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2020/12.27 | PROMOTION TO UNIVERSITY TEACHERS UNDER UGC – CAS |
| ತೀರ್ಮಾನ | The recommendations of the Selection Committee and Screening cum Evaluation Committee in various subjects for promotion of teachers in various disciplines to the higher AGP furnished at Annexure–A is approved. Further, the Syndicate has also decided to extend the monetary benefits to the teachers from the date of the Eligibility or from the decision of the Syndicate which was held on 25-11-2020 whichever is later. |
| ಸಾಮಾನ್ಯ ಸಭೆ 2020/12.28 | ಚಾಮರಾಜನಗರ ಸ್ನಾತಕೋತ್ತರ ವಿಭಾಗದಲ್ಲಿ ನಡೆಯುತ್ತಿರುವ ಕಾಮಗಾರಿಯಿಂದ ಉಂಟಾಗಿರುವ ಗೊಂದಲಗಳ ಸಂಬಂಧ ಚರ್ಚಿಸುವಂತೆ ಕೋರಿರುವುದರ ಬಗ್ಗೆ. |
| ತೀರ್ಮಾನ | ದಿನಾಂಕ: 28-12-2020ರಂದು ಚಾಮರಾಜನಗರ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ನಡೆದ ಸಭೆಯ ನಡಾವಳಿಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |

**ಇತರೆ ವಿಷಯಗಳು**

1. ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಚಾಮರಾಜನಗರ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿನಿಲಯದಲ್ಲಿನ ಕಾಮಗಾರಿ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ ಆದರೂ ಕಾಮಗಾರಿಗಳ ಬಿಲ್‌ಗಳಿಗೆ ಸಹಿಯಾಗಿ ಹಣ ಬಿಡುಗಡೆಯಾಗುತ್ತಿರುವುದರಿಂದ, ಇಂಜಿನಿಯರಿಂಗ್ ವಿಭಾಗದಿಂದ ಕಾಮಗಾರಿಯ ಕೆಲಸಗಳ ಬಗ್ಗೆ ಪರಿಶೀಲನೆ ನಡೆಸಬೇಕೆಂದರು. ಹಾಗೂ ಸದರಿ ವಿದ್ಯಾರ್ಥಿನಿಲಯಕ್ಕೆ ಸೆಕ್ಯೂರಿಟಿ ಗಾರ್ಡ್‌ರವರು ಕರ್ತವ್ಯ ನಿರ್ವಹಿಸದೆ ಇರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರ ಅಭಿಪ್ರಾಯವನ್ನು ಅನುಮೋದಿಸಿದ ಸಭೆಯು, ಚಾಮರಾಜನಗರ ಸ್ನಾತಕೋತ್ತರ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲು ತೀರ್ಮಾನಿಸಿತು.

2. ಶ್ರೀ ಕುಮಾರ್‌ರವರು ಮಾತನಾಡಿ, ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳು ಕೋವಿಡ್-19 ಕಾರಣದಿಂದ ಪ್ರವೇಶಾತಿ ಪ್ರಮಾಣವು ಕಡಿಮೆಯಾಗಿರುತ್ತದೆ. ಆದುದರಿಂದ, ಪ್ರವೇಶಾತಿ ದಿನಾಂಕವನ್ನು ಇನ್ನು 15 ದಿವಸಗಳು ವಿಸ್ತರಿಸಬೇಕೆಂದು ಸಭೆಯಲ್ಲಿ ಕೋರಿದರು.

   ಮಾನ್ಯ ಸದಸ್ಯರ ಕೋರಿಕೆಯನ್ನು ಸಭೆಯು ಅನುಮೋದಿಸಿತು.

3. ಡಾ. ಈ.ಸಿ.ನಿಂಗರಾಜ್‌ಗೌಡರವರು ಮಾತನಾಡುತ್ತಾ, ಇತರೆ ಸಂದರ್ಭದಲ್ಲಿ ಧರಿಸುವ ಘಟಿಕೋತ್ಸವದ ಗೌನ್‌ಗಳಂತೆ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಸಿಂಡಿಕೇಟ್ ಸದಸ್ಯರುಗಳ ಗೌನ್‌ಗಳ ವಿನ್ಯಾಸವನ್ನು ಭಾರತೀಯ ಸಂಸ್ಕೃತಿಗೆ ಹೊಂದಾಣಿಕೆಯಾಗುವಂತೆ ಬದಲಾಯಿಸಬೇಕೆಂದು ಸಭೆಯನ್ನು ಕೋರಿದರು.

   ಮಾನ್ಯ ಕುಲಪತಿಯವರು ಇವರ ಸಲಹೆಯನ್ನು ಅನುಮೋದಿಸುತ್ತಾ, ಘಟಿಕೋತ್ಸವ ಗೌನ್ ವಿನ್ಯಾಸದ ಬಗ್ಗೆ ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅಧ್ಯಕ್ಷತೆಯಲ್ಲಿ ಇಬ್ಬರು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಿಂಡಿಕೇಟ್ ಉಪ ಸಮಿತಿ ರಚನೆ ಮಾಡಿ, ಸಮಿತಿಯ ವರದಿಯನ್ನು ಆಧರಿಸಿ ಈ ಸಂಬಂಧ ಪರಿಷ್ಕೃತ ಅಧಿನಿಯಮ ಸಿದ್ಧಪಡಿಸಲು ಕ್ರಮ ಕೈಗೊಳ್ಳಲು ನಿರ್ಣಯಿಸಿತು.

4. ಮಾನ್ಯ ಸದಸ್ಯರಾದ ಡಾ. ಈ.ಸಿ.ನಿಂಗರಾಜ್‌ಗೌಡರ ಸಲಹೆ ಮೇರೆಗೆ, ವಿದ್ಯಾಶ್ರಮ ಪದವಿ ~~ಪೂರ್ವ~~ ಕಾಲೇಜಿನ ಸಂಯೋಜನೆ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಲು ಒಂದು ಸಿಂಡಿಕೇಟ್ ಸಮಿತಿ ರಚನೆ ಮಾಡಲು ಸಭೆಯು ನಿರ್ಣಯಿಸಿತು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಮತ್ತು ಅಧ್ಯಕ್ಷರು